Sri ANNA RAO GANAMUKHI.—I was asked to point out the specific provision.

Mr. SPEAKER.—The Hon'ble Member is doing so after the bus has left.

Sri ANNA RAO GANAMUKHI.— Rule 306 reads thus:

"A statement may be made by a Minister on a matter of public importance with the consent of the Speaker, but no question shall be asked at the time the statement is made."

Then, about the residuary powers, rule 325 provides:

"All matters not specifically provided for in these rules and all questions relating to the detailed working of these rules shall be regulated in such manner as the Speaker may from time to time direct."

Mr. SPEAKER.—Would the Hon'ble Member like to have a little more study of it? I will take it up tomorrow if he would like it.

MYSORE OFFICIAL LANGUAGE BILL, 1963.

(Motion to consider—debate continued.)

†ಶ್ರೀ ಸಿ. ಜೆ. ಮುಕ್ಕಣ್ಣಪ (ಸಿರಾ).—ಸ್ವಾಮಿ, ಅಧ್ಯಕ್ಷರೇ, ನನ್ನ ಸ್ನೇಹಿತರು ಈ ರಾಜ ಭಾಷೆಯ ವಿಚಾರದಲ್ಲಿ ಬಹಳ ಅತೃಪ್ತಿ, ಅಸಮಾಧಾನಗಳನ್ನು ವ್ಯಕ್ತಪಡಿಸಿದರು. ಇದಕ್ಕೆ ರಾಜಭಾಷೆ ಎನ್ನುವುದು ಸರಿಯೇ ಎಂದು ನಾನು ಕೇಳುತ್ತೇನೆ. ಮೈಸೂರು ರಾಜ ಭಾಷೆಗೆ ಸಂಬಂಧಪಟ್ಟ ವಿಧೇಯಕ ಎಂದು ಈ ಮಸೂದೆಯಲ್ಲಿ ಹೇಳಿದ್ದಾರೆ. ಇದರಿಂದ ಕನ್ನಡ ಭಾಷೆ ನಾಶವಾಗುತ್ತಿದೆ. ಇದನ್ನು ಬರೆದವರಿಗೆ ಕನ್ನಡ ಭಾಷೆಯ ಗಂಧ ಸ್ವಲ್ಪ ಕಡಮೆ ಇದೆ ಎಂದು ಹೇಳಬಹುದು.

ಶ್ರೀ ಡಿ. ಎ. ಗೌಡ.—ಅಫೀಷಿಯಲ್ ಲ್ಯಾಂಗ್ವೇಜ್ ಎಂಬುದು ರಾಜ ಭಾಷೆ ಎಂದು ಆಗುತ್ತದೆಯೆ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ಎಂಥ ಸಮಯದಲ್ಲಿ ಈ ಮಸೂದೆಯನ್ನು ಚರ್ಚೆ ಮಾಡುತ್ತಾ ಇದ್ದೇವೆ ಎಂದರೆ ಕನ್ನಡನಾಡಿನಲ್ಲಿ ಹುಟ್ಟಿ, ಕನ್ನಡನಾಡಿನಲ್ಲಿ ಬೆಳೆದು, ಕನ್ನಡಾಂಬೆಯ ಪುತ್ರರು, ಕನ್ನಡ ರಾಜ್ಯದ ರಾಜ್ಯಭಾರ ಮಾಡುತ್ತಿರುವಾಗ್ಗೆ, ಕನ್ನಡ ಭಾಷೆ ಅರಿತುಕೊಂಡು ಕನ್ನಡ ಭಾಷೆಯಲ್ಲಿ ಮಾತನಾಡಲು ಅವಕಾಶವಿರುವಾಗ್ಗೆ ಈ ಮಸೂದೆಯಮೇಲೆ ಚರ್ಚೆ ನಡೆಸಿ ಮಾತನಾಡುತ್ತಿದ್ದೇವೆ.

Mr. SPEAKER.—The Hon'ble Member will come to the point and speak on the Bill.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಕನ್ನಡವು ರಾಜ್ಯಭಾಷೆಯಾಗಬೇಕು; ಕಾನೂನು ಕಟ್ಟಳೆಗಳು ಕನ್ನಡದಲ್ಲಿರಬೇಕು; ಜನರಿಗೆ ಸುಲಭವಾಗಿ ಅರ್ಥವಾಗಬೇಕು ಎನ್ನುವುದಕ್ಕೆ ನಿಸ್ಸಂದೇಹವಾಗಿ ಯಾರದೂ ವಾದವಿಲ್ಲ. ಆದರೆ ಈ ಭಾಷಾವಾರು ಪ್ರಾಂತ ರಚನೆ ಮಾಡಿರುವುದಕ್ಕೆ ನನ್ನ ತಕರಾರು ಇದೆ. ಮೈಸೂರಿನಲ್ಲಿ ಕನ್ನಡ, ತಮಿಳು ನಾಡಿನಲ್ಲಿ ತಮಿಳು, ಆಂಧ್ರದಲ್ಲಿ ತೆಲುಗು, ಒರಿಸ್ಸಾನಲ್ಲಿ ಒರಿಸ್ಸಾ ಭಾಷೆ, ಬಿಹಾರ, ರಾಜಸ್ಥಾನದಲ್ಲಿ ಅಲ್ಲಿಯ ಭಾಷೆ, ಪಂಜಾಬಿನಲ್ಲಿ ಪಂಜಾಬೀ ಭಾಷೆ ಮಾತನಾಡಬೇಕು ಎಂದು ಹೇಳಿದ ಹಾಗೆ ಆಯಿತು. ಕನ್ನಡ ಭಾಷೆ ಅರಿತವನು ಮದ್ರಾಸಿಗೆ ಹೋಗಿ ಕನ್ನಡದಲ್ಲಿ ಮಾತನಾಡಿ ಅಲ್ಲಿ ಕೇಳಿದರೆ ಏನು ಅರ್ಥವಾಗುತ್ತದೆ? ತಮಿಳು ಮಾತನಾಡುವವನು ಕನ್ನಡ ದೇಶದಲ್ಲಿ ಬಂದು ತಮಿಳಿನಲ್ಲಿ ಮಾತನಾಡಿದರೆ ಏನು ಅರ್ಥವಾಗುತ್ತದೆ? ಮಹಾತ್ಮಾ ಗಾಂಧಿಯವರು ಜನತೆಯನ್ನು ಒಂದುಗೂಡಿಸುವುದರ ಸಲುವಾಗಿ ಹಿಂದೀ ಕಲಿಯಿರಿ ಎಂದು ಹೇಳಿದರು. ಒಂದು ಭಾಷೆ ಎಲ್ಲರಿಗೂ ತಿಳಿಯುತ್ತಿದ್ದರೆ ಆ ಭಾಷೆಯಲ್ಲಿ ಮಾತನಾಡಲು ಅವಕಾಶ ದೊರೆಯುತ್ತದೆ. ಆದರೆ ಈಗ ಏನಾಗಿದೆ ಎಂದರೆ ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ಅದಕ್ಕೊಂದು ಪ್ರಾಮುಖ್ಯತೆಕೊಟ್ಟು ಒಂದು ಸ್ಥಾನಮಾನಕೊಟ್ಟು ಈ ರಾಜಭಾಷೆಯ ಕಾನೂನನ್ನು ಮಾಡಿದ್ದಾರೆ. ಕನ್ನಡ ಭಾಷೆ ಮಾತನಾಡುವವರು ಬೇರೆ ದೇಶದಲ್ಲಿ ಹೋಗಿ ಕನ್ನಡ ಮಾತನಾಡಿದರೆ ಏನು

ಅರ್ಥವಾಗುತ್ತದೆ ? ತಾವು ಇಂಗ್ಲೆಂಡ್ ದೇಶಕ್ಕೆ ಹೋಗಿದ್ದಿರಿ. ಅಲ್ಲಿ ಕನ್ನಡ ಭಾಷೆಯಲ್ಲಿ ತಾವು ಮಾತನಾಡಿದ್ದರೆ ಅವರಿಗೆ ಏನು ತಿಳಿಯುತ್ತಿತ್ತು ? ಒಬ್ಬರು ಅಧ್ಯಕ್ಷರು ಬಂದಿದ್ದರು ; ಅವರು ಕನ್ನಡ ದಲ್ಲಿ ಮಾತನಾಡಿದರು, ಅವರ ಭಾಷಣವನ್ನು ಬರೆದುಕೊಳ್ಳಲು ಆಗಲಿಲ್ಲ ಎಂದು ವರದಿಯಲ್ಲಿ ಬ್ಲ್ಯಾಂಕ್ ಬಿಟ್ಟು ಬಿಡುತ್ತಿದ್ದರು. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎನ್ನುವುದನ್ನು ಅರ್ಥಮಾಡಿ ಕೊಳ್ಳಬೇಕು. ಸಮಗ್ರ ದೇಶಕ್ಕೆ ಒಂದು ಭಾಷೆ ಇರುವುದು ಒಳ್ಳೆಯದು. ಭಾರತದಲ್ಲಿಯ ಎಲ್ಲ ಭಾಷೆ ಗಳಿಗೆ ಮಾತೃಸ್ಥಾನದಲ್ಲಿರುವ ಸಂಸ್ಕೃತ ಭಾಷೆಗೆ ಏಕೆ ಪ್ರಾಮುಖ್ಯ ಸ್ಥಾನ ದೊರೆತಿರುವುದಿಲ್ಲ? ಸಂಸ್ಕೃತವೇ ಭಾರತ ದೇಶದ ಭಾಷೆಯೆಂದು ಏಕೆ ಮಾಡಲಿಲ್ಲ? ನಮ್ಮ ಸಂಸ್ಥಾನದಲ್ಲಿ ಕನ್ನಡವೇ ರಾಜ್ಯ ಭಾಷೆಯಾಗಬೇಕು, ಸರಕಾರದ ವ್ಯವಹಾರ ಕನ್ನಡದಲ್ಲಿ ನಡೆಯಬೇಕು. ಆದರೆ ಈ ರೀತಿ ನಡೆಯುತ್ತಿಲ್ಲ. ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕನ್ನಡವೇ ಬರುವುದಿಲ್ಲ. ಕನ್ನಡದಲ್ಲಿ ಮಾತ ನಾಡಿದರೆ ಅವರಿಗೆ ಏನೂ ತಿಳಿಯುವುದಿಲ್ಲ. ಇಂಥ ಕಠಿಣ ಪರಿಸ್ಥಿತಿ ಇಂದು ನಮ್ಮ ದೇಶದಲ್ಲಿದೆ. ವಿಧಾನಸೌಧದಲ್ಲಿರುವ ಅನೇಕ ಅಧಿಕಾರಿಗಳಿಗೆ ಕನ್ನಡ ಭಾಷೆ ಗೊತ್ತಿಲ್ಲ. ಸರಕಾರ ಮಾಡುತ್ತಿರುವ ಕೆಲಸ ಕಾರ್ಯಗಳನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಒಂದು ರೀತಿಯ ವಿಡಂಬನೆ ನಡೆದಿದೆ. ಕಠಿಣ ಶಬ್ದಗಳಿಗೆ ಸುಲಭವಾದ ಪದಗಳನ್ನು ಆರಿಸಿ, ಸುಲಭ ಶೈಲಿಯಲ್ಲಿ ಭಾಷಾಂತರ ಮಾಡುವುದಕ್ಕೆ ಏನಾದರೂ ಸಂಶೋಧನೆ ಮಾಡಿದ್ದಾರೆಯೇ? ಕನ್ನಡದಲ್ಲಿ ವಿಶ್ವಕೋಶ ರಚನೆ ಮಾಡುವುದು ಏನಾಯಿತು ?

Mr. SPEAKER.—The Hon'ble Member can reserve it for the Budget or for the Supplementary Demand. Now let him deal with the Bill.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಕನ್ನಡ ಭಾಷೆಯನ್ನು ರಾಜ ಭಾಷೆಯಾಗಿ ಮಾಡು ವುದಕ್ಕೆ ಎಷ್ಟರಮಟ್ಟಿಗೆ ಪ್ರಯತ್ನ ಮಾಡುತ್ತಿದ್ದಾರೆ? ಅದಕ್ಕೆ ಏನು ಕಷ್ಟಪಟ್ಟಿದ್ದಾರೆ? ಈ ಮಸೂದೆಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಈ ವಿಶ್ವಕೋಶದ ವಿಚಾರವನ್ನು ಹೇಳಬೇಕಾಯಿತು. ಇದು ಬಹಳ ಮಹತ್ತ್ವದ ವಿಚಾರ. ಇದನ್ನು ಹೇಳದಿದ್ದರೆ ಏನು ಪ್ರಯೋಜನ! ಅಧಿಕಾರದಲ್ಲಿದ್ದ ಜನ ಕನ್ನಡ ಭಾಷೆಯ ಬಗ್ಗೆ ಆಸ್ಥೆವಹಿಸುತ್ತಿಲ್ಲ. ಕನ್ನಡದಲ್ಲಿ ತಯಾರಾಗಬೇಕಾಗಿರುವ ವಿಶ್ವಕೋಶ ಅಂದರೆ ಎನ್‌ಸೈಕ್ಲೋಪಿಡಿಯಾ ರಚನೆ ಎಲ್ಲಿಯೋ ಮುಳುಗಿ ಹೋಯಿತು. ಕನ್ನಡ ಭಾಷೆ ರಾಜ್ಯ ಭಾಷೆಯಾಗಬೇಕು ಎಂದು ಒಂದು ಕಡೆ ಹೇಳುತ್ತಾರೆ. ನಮ್ಮ ವಿದ್ಯಾ ಮಂತ್ರಿಗಳು ವಿದ್ಯಾಶಾಲೆ ಗಳಲ್ಲಿ 5ನೇ ತರಗತಿಯಿಂದ ಇಂಗ್ಲೀಷ್ ಕಲಿಯಲು ವ್ಯವಸ್ಥೆ ಮಾಡಲು ತೀರ್ಮಾನ ತೆಗೆದುಕೊಂಡಿದ್ದೇ ವೆಂದು ಹೇಳುತ್ತಾರೆ. ಒಂದು ಕಡೆ ಎಲ್ಲಾ ಕನ್ನಡದಲ್ಲೇ ನಡೆಯಬೇಕು ಎಂದು ಹೇಳುತ್ತೀರಿ, ಇನ್ನೊಂದು ಕಡೆ 5ನೆಯ ಕ್ಲಾಸಿನಲ್ಲಿ ಇಂಗ್ಲೀಷನ್ನು ಮುಂದುವರಿಸಬೇಕು ಎಂದು ಅವಕಾಶ ಮಾಡಿ ರುವುದು ಒಂದಕ್ಕೊಂದಕ್ಕೆ ತದ್ವಿರುದ್ಧವಾಗಿದೆ. ಈಗ ಕನ್ನಡ ರಾಜ್ಯಭಾಷೆಯಾಗಬೇಕೆಂದು ಹೇಳುತ್ತಿ ದ್ದೀರಿ. ರೆವಿನ್ಯೂ ಇನ್‌ಸ್ಪೆಕ್ಟರು ತಹಸೀಲ್ದಾರರಿಗೆ ಕಾಗದ ಬರೆಯಬೇಕಾದರೆ 'ಇತ್ತಿಲ್ಲೆ' ಎಂದು ಬರೆಯುತ್ತಾರೆ. 'ಇತ್ತಿಲ್ಲೆ' ಎಂದರೆ ತಹಸಿಲ್ದಾರರಿಗೆ ಎಂದು ಅರ್ಥ. ಆ ಕಾಗದದ ಜೊತೆಯಲ್ಲಿ ಕೆಲವು ಕಾಗದಗಳನ್ನು ಲಗತ್ತಿಸಿ ಆ ಬಗ್ಗೆ ಒಂದು ಸ್ಟೇಟ್‌ಮೆಂಟ್ ಲಗತ್ತಿಸುತ್ತಾರೆ. ನಮ್ಮ ಸರ್ಕಾರ ಕನ್ನಡದಲ್ಲೇ ವ್ಯವಹಾರ ನಡೆಸಬೇಕು, ಕನ್ನಡದಲ್ಲಿ ಅರ್ಜಿ ಕೊಟ್ಟರೆ ಕನ್ನಡದಲ್ಲೇ ಜವಾಬು ಕೊಡಬೇಕು ಎಂದು ಹೇಳುತ್ತಾರೆ. ಕನ್ನಡ ಟೈಪ್‌ರೈಟರ್ ಒದಗಿಸಿ ಕನ್ನಡದಲ್ಲೇ ಎಲ್ಲ ಆಫೀಸುಗಳಲ್ಲೂ ವ್ಯವಹಾರ ನಡೆಸುವ ವಿಚಾರದಲ್ಲಿ ಹಿಂದೆ ನಾನು ಒಂದು ಪ್ರಶ್ನೆ ಹಾಕಿದ್ದೆ. ತುಮಕೂರು ಜಿಲ್ಲೆಗೆ ಒಂದು ಟೈಪ್‌ರೈಟರನ್ನು ಒದಗಿಸಿದ್ದರು. ಆ ಸಂಬಂಧದಲ್ಲಿ ಆ ಟೈಪ್‌ರೈಟರ್ ಉಪಯೋಗದಲ್ಲಿದೆಯೆ ಎಂದು ನಾನೊಂದು ಉಪ ಪ್ರಶ್ನೆ ಹಾಕಿದೆ. ಅದಕ್ಕೆ ವಿದ್ಯಾ ಮಂತ್ರಿಗಳು ಉತ್ತರವಾಗಿ ಅಲ್ಲಿ ಅದನ್ನು ಉಪಯೋಗಿಸದಿದ್ದರೆ ಬೇರೆ ಡಿಸ್ಟ್ರಿಕ್ಟಿಗೆ ಕೊಡುತ್ತೇವೆ ಎಂದು ಹೇಳಿದರು. ಅದನ್ನು ನೋಡಿದರೆ ಮಾತೃ ಭಾಷೆ ಅಭಿವೃದ್ಧಿ ಆಗಬೇಕೆಂಬ ಬಗ್ಗೆ ಎಷ್ಟುಮಟ್ಟಿಗೆ ಉತ್ಸಾಹವಿದೆ, ಔದಾಸೀನ್ಯವಿದೆ ಎಂಬುದು ವ್ಯಕ್ತವಾಗುತ್ತದೆ.

4-00 P.M.

ಕನ್ನಡದಲ್ಲೇ ಎಲ್ಲ ವ್ಯವಹಾರವೂ ನಡೆಯಬೇಕೆಂದು ಹೇಳುತ್ತೀರಿ. ಹಾಗಾದರೆ ವಿಧಾನಸೌಧ ದಲ್ಲಿ ಇಂಗ್ಲೀಷಿನಲ್ಲೇ ವ್ಯವಹಾರ ನಡೆಸಿ ಉಳಿದ ಕಡೆ ಕನ್ನಡದಲ್ಲಿ ನಡೆಸುವುದು ಉಚಿತವೇ? ಎಲ್ಲ ಕಡೆಯೂ ಕನ್ನಡದಲ್ಲೇ ವ್ಯವಹಾರ ನಡೆಯಬೇಕಾದ್ದು ಸೂಕ್ತ. ಇಲ್ಲದಿದ್ದರೆ ಕನ್ನಡಕ್ಕೆ ತರ್ಜುಮೆ ಮಾಡಿ ಕೆಲವು ಸಂದರ್ಭಗಳಲ್ಲಿ ತಿಳಿಸಬೇಕಾಗುತ್ತದೆ. ಕನ್ನಡ ರಾಜ್ಯ ಭಾಷೆಯಾಗುವಾಗ ವಿಧಾನ ಮಂಡಲದ ಕಾರ್ಯಕಲಾಪಗಳೇಕೆ ಇಂಗ್ಲೀಷಿನಲ್ಲಿ ನಡೆಯಬೇಕು ? ಡೆಪ್ಯುಟಿ ಕಮಿಷನರ ಆಫೀಸಿನಲ್ಲಿ ಕನ್ನಡ, ವಿಧಾನಸೌಧದಲ್ಲಿ ಕನ್ನಡ ವ್ಯವಹಾರ ಭಾಷೆಯಾಗುವಾಗ ವಿಧಾನಸಭೆಯಲ್ಲೇಕೆ ಇಂಗ್ಲೀಷಿ ನಲ್ಲಿ ವ್ಯವಹಾರ ನಡೆಯಬೇಕು ? ಇದನ್ನೇಕೆ ಹೇಳುವದೆಂದರೆ ನೀವು ಒಳ್ಳೆಯ ಮನಸ್ಸಿನಿಂದ ಮುಂದು

(ಶ್ರೀ. ಸಿ. ಜೆ. ಮುಕ್ಕಣ್ಣಪ್ಪ)

ವರಿಯುವಂತೆ ತೋರುತ್ತಿಲ್ಲ. ನಿಮಗೆ ಸರಿಯಾದ ಉತ್ಸಾಹವಿದ್ದಂತೆ ಕಂಡುಬರುತ್ತಿಲ್ಲ. ನಿಮ್ಮಲ್ಲಿ ನಿರುತ್ಸಾಹವಿರುವಾಗ ಯಾರೋ ಮಾಡಿರುವುದನ್ನು ನೋಡಿ ನಾವೇಕೆ ಹಾಗೆ ಮಾಡಬಾರದೆಂದು ಮಾಡುವುದು ಸರಿಯಲ್ಲ. ಅನೇಕ ವರ್ಷಗಳಕಾಲ ಹೋರಾಟ ನಡೆಸಿ ಹರಿದು ಹಂಚಿಹೋಗಿದ್ದ ಕನ್ನಡ ನಾಡನ್ನು ಒಂದುಗೂಡಿಸಿದ್ದೇವೆ, ಅದನ್ನು ಬೆಳೆಸಬೇಕು ಎಂದು ಹೇಳುವಾಗ ಅದಕ್ಕಾಗಿ ಮುಂದು ವರಿಯುವ ದಾರಿಯಲ್ಲಿ ಸಾಕಷ್ಟು ಶ್ರದ್ಧೆ ಸರ್ಕಾರಕ್ಕಿರಬೇಕು.

ಕನ್ನಡದಲ್ಲಿ ಪದ್ಯ ಸಂಗ್ರಹ ಎಂಬ ಪುಸ್ತಕವಿದೆ. ಅದರಲ್ಲಿ 'ಸುಲಿದ ಬಾಳೆಯ ಹಣ್ಣಿನಂದದಿ...... ಎಂಬುದಾಗಿ ಮುಂದುವರಿಯುವ ಒಂದು ಪದ್ಯವಿದೆ. ಅದು ಎಷ್ಟು ರಮ್ಯವಾಗಿದೆ, ಹಿಂದೆ ನಾವು ಅದನ್ನು ಆನಂದದಿಂದ ಓದಿದ್ದೇವೆ. ಉಪಾಧ್ಯಾಯರ ಎದುರಿಗೆ ಕೈಕಟ್ಟಿಕೊಂಡು ಓದಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ನಿವೃತ್ತರಾಗುವಕಾಲ ಸಮೀಪಿಸುತ್ತಿರುವಾಗ ಕನ್ನಡವನ್ನು ರಾಜಭಾಷೆಯನ್ನಾಗಿ ಮಾಡಲು ಇರುವ ತೊಡಕೇನು ಎಂದು ಹೇಳಿದ್ದರೆ ಚೆನ್ನಾಗಿತ್ತು. ಕನ್ನಡವನ್ನು ರಾಜ್ಯ ಭಾಷೆಯಾಗಿ ಮಾಡಬೇಕೆಂದಿದ್ದಾರೆ. ಹಾಗೆ ಮಾಡದಿದ್ದರೆ ಚಳವಳಿನಡೆಸುತ್ತಿರುವವರು ಏನೋ ಮಾಡುವುದಾಗಿ ಹೆದರಿಸುತ್ತಿರುವುದನ್ನು ಪತ್ರಿಕೆಗಳಲ್ಲಿ ನೋಡಿದ್ದೇವೆ. ಅದನ್ನು ಮನಗೊಂಡು ಕನ್ನಡವನ್ನು ಬೆಳೆಸಲು ಸರ್ಕಾರದವರು ಒಂದು ಬಿಲ್ಲನ್ನು ರಚಿಸಿದ್ದಾರೆ. ಕಾಸರಗೋಡಿನಲ್ಲಿ ಎರಡನೆಯ ಬಾಲ ಬೋಧೆಯಲ್ಲಿ ಕಾಂಗ್ರೆಸ್ ಧ್ವಜ ಅಚ್ಚುಹಾಕಿ ಮಹಾತ್ಮ ಗಾಂಧಿ ಮತ್ತು ಚರಕ ತೋರಿಸಿ ಇದು ನಮ್ಮ ರಾಷ್ಟ್ರಧ್ವಜ ಎಂದು ತೋರಿಸಿದ್ದಾರೆ. ಅದನ್ನು ನೋಡಿದರೆ ನಮ್ಮ ಸರ್ಕಾರ ಹೇಗಿದೆ ಎಂಬುದು ವ್ಯಕ್ತವಾಗುತ್ತದೆ. ಕನ್ನಡದ ತಿಳಿವಳಿಕೆಯಿಲ್ಲದವರಿಗೆ ಜಮೀನುಕೊಡಿ ಎಂದು ಅರ್ಜಿ ಕೊಟ್ಟರೆ ಅವರು ಮನೆ ಕಟ್ಟಲು ಲೈಸೆನ್ಸ್ ಕೊಟ್ಟಹಾಗಿದೆ ಇದು. ಕನ್ನಡ ಚೆನ್ನಾಗಿ ಬೆಳೆಸಬೇಕು, ಬಹಳ ಕಷ್ಟಪಟ್ಟು ಈ ಕನ್ನಡ ರಾಜ್ಯ ಕಟ್ಟಿದೆ. ಚರಿತ್ರೆಯಲ್ಲಿ ಹೆಸರನ್ನುಳಿಸುವುದಕ್ಕೆ, ಕರ್ನಾಟಕದ ಹಿರಿಮೆಯನ್ನುಳಿಸುವುದಕ್ಕೆ ಪ್ರಯತ್ನಿಸಬೇಕು ಎಂದು ಹೇಳುವಾಗ ಅದಕ್ಕಾಗಿ ಮನಸ್ಸುಮಾಡಿರುವ ನಿಜಲಿಂಗಪ್ಪನವರು ಪ್ರಥಮತಃ ಅವರ ಕಾಲದಲ್ಲೇ ಕನ್ನಡಕ್ಕೆ ತಕ್ಕ ಸ್ಥಾನಮಾನ ದೊರಕಿಸಲು ಮಾಡುತ್ತಿರುವ ಈಗಿನ ಪ್ರಯತ್ನ ಸಮರ್ಪಕವಾಗಿಲ್ಲ. ರಾಜ್ಯದಲ್ಲಿರುವ ಬಹುತೇಕ ಜನರು ಮಾತನಾಡುವ ಕನ್ನಡವನ್ನು ರಾಜ್ಯಭಾಷೆ ಮಾಡಬೇಕೆಂದು ಮನಸ್ಸುಮಾಡಿರುವಾಗ, ಉದ್ದೇಶ ಮತ್ತು ಕಾರಣಗಳ ವಿವರದಲ್ಲಿ ತಿಳಿಸಿರುವ ಸಮಿತಿಯು ಕೊಟ್ಟಿರುವ ವರದಿಯನ್ನು ನಮಗೆ ಕೊಟ್ಟಿದ್ದರೆ ಇಷ್ಟು ಉದ್ದವಾದ ಭಾಷಣ ಮಾಡಬೇಕಾಗಿರಲಿಲ್ಲ. ಆ ವರದಿ ನನಗೆ ಸಿಕ್ಕಲಿಲ್ಲ. ಲೈಬ್ರೆರಿಯಲ್ಲಿ ಮತ್ತು ಆಫೀಸಿನಲ್ಲಿ ಹುಡುಕಿದರೂ ಸಿಕ್ಕದಿದ್ದುದರಿಂದ ಇಷ್ಟೆಲ್ಲಾ ಒತ್ತಿ ಹೇಳಬೇಕಾಗಿದೆ. ಕನ್ನಡ ಭಾಷೆಗೆ ನನ್ನ ಹೃತ್ಪೂರ್ವಕವಾದ ಬೆಂಬಲವಿದೆ. ಆದರೆ ಈ ಮಸೂದೆಯನ್ನು ಕಾರ್ಯರೂಪಕ್ಕೆ ತರುವಾಗ ಕಷ್ಟವಾಗುತ್ತದೆ, ಮಾಡಿರುವ ಪ್ರಯತ್ನ ಎಳ್ಳಷ್ಟೂ ಸಾಲದು ಎಂದು ತೋರಿಸಲು ನಾನು ಹೆಚ್ಚಾಗಿ ಮಾತನಾಡಬೇಕಾಗಿದೆ. ಕನ್ನಡಭಾಷೆಯಲ್ಲೇ ರಾಜ್ಯದ ವ್ಯವಹಾರ ನಡೆಸಬೇಕೆನ್ನುವಾಗ ಯಾವ ಯಾವ ಮಟ್ಟದಲ್ಲಿ ಕನ್ನಡವನ್ನು ಹೇಗೆ ಬೆಳೆಸಿದ್ದೀರೆಂಬುದನ್ನು ಗಮನಿಸಬೇಕು. ಈಗ ನನ್ನ ಮಿತ್ರರಾದ ಕೊಳ್ಕೆಬೈಲ್ ಅವರು ಮತ್ತು ನಾನು ಕನ್ನಡದ ಪರೀಕ್ಷೆಗೆ ಕುಳಿತರೆ ನಾನು ಅವರಿಗಿಂತ ಎಷ್ಟೋ ಚೆನ್ನಾಗಿ ಬರೆಯಬಲ್ಲೆ. ಈ ಸಂದರ್ಭದಲ್ಲಿ ನಮಗೆ ತೋರುವುದನ್ನು ಸಂಪೂರ್ಣವಾಗಿ ವ್ಯಕ್ತಪಡಿಸಲು ನಮಗೆ ಅವಕಾಶವಿರಬೇಕು.

Mr. SPEAKER.—Encouragement to Kannada language is not one of the provisions in the Constitution.

Sri C. J. MUCKANNAPPA.—Unless the Government make people to learn and speak in Kannada, what is the use of having this law?

Mr. SPEAKER.—It is a very good point but not a point for discussion under the provisions of the Bll.

Sri C. J. MUCKANNAPPA.—I am just mentioning the fundamentals of Rajyabhashe. The Government have failed in their duties in not encouraging persons to learn the Kannada language.

Mr. SPEAKER.—So, is the Hon'ble Member opposing?

Sri C. J. MUCKANNAPPA.—The Government have not given sufficient encouragement to the Kannada language. ಈ ಸಭೆಯಲ್ಲಿ ಯಾರನ್ನೂ ಅಕ್ಯೂಸ್ ಮಾಡುತ್ತಾ ಇಲ್ಲ. ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡಬೇಕೆಂದು ಹೊರಟಿದ್ದೀರಲ್ಲಾ; ಆ ದಿಕ್ಕಿನಲ್ಲಿ ಎಷ್ಟು ವೇಗವಾಗಿ ಹೋಗುತ್ತಿದ್ದೀರಾ ಎನ್ನುವುದನ್ನು ಹೇಳುತ್ತಾ ಇದ್ದೇನೆ.

ಮದ್ರಾಸ್, ಬೊಂಬಾಯಿ, ದೆಹಲಿ ಪ್ರಾಂತಗಳು ಈ ವಿಷಯದಲ್ಲಿ ಯಾವ ವೇಗದಲ್ಲಿ ಹೋಗುತ್ತಿರುವವವೋ ಆ ವೇಗವನ್ನು ನೀವು ಮುಟ್ಟುವುದು ಯಾವಾಗ ? ಚಿಕ್ಕಬಳ್ಳಾಪುರದ ರೈಲು ಗಂಟೆಗೆ 12 ಮೈಲಿ ವೇಗದಲ್ಲಿ ಹೋಗುತ್ತಿರುವಂತೆ ಹೋಗುತ್ತಿದ್ದೀರ, ಅದಕ್ಕೋಸ್ಕರ ಇಷ್ಟು ದುಃಖದಿಂದ ಹೇಳುತ್ತಿದ್ದೇನೆ. ಅದನ್ನು ಇಲ್ಲಿಗೆ ಬಿಟ್ಟು ಬಿಡುತ್ತೇನೆ.

ಇಂಗ್ಲೀಷ್ ಭಾಷೆ ಅಧಿಕಾರದಲ್ಲಿರಬೇಕು ಎನ್ನುವುದು ನಿಮ್ಮ ಅಭಿಪ್ರಾಯವೆ? ಅಥವಾ ಇಂಗ್ಲೀಷ್ ಭಾಷೆಯಲ್ಲಿ ಯಾವ ಕರೆಸ್ಪಾಂಡೆನ್ಸೂ ಮಾಡಬಾರದೆಂದು ನಿಮ್ಮ ಅಭಿಪ್ರಾಯವೆ? ಯಾವ ಯಾವ ಭಾಗದಲ್ಲಿ ಕನ್ನಡದಲ್ಲಿ, ಯಾವ ಯಾವ ಭಾಗದಲ್ಲಿ ಇಂಗ್ಲೀಷಿನಲ್ಲಿ ವ್ಯವಹಾರ ಮಾಡಬಹುದು ಎನ್ನುವುದಕ್ಕೆ ಸರ್ಕಾರದವರು ಒಂದು ಅಧಿಕಾರವನ್ನು ಇಟ್ಟುಕೊಂಡಿದ್ದಾರೆ. ರಾಜ್ಯಭಾಷೆ ಅನ್ನತಕ್ಕಂಥಾದ್ದನ್ನು ನಿಗದಿ ಮಾಡಿದ ಕೂಡಲೆ, ಈ ವಿಧೇಯಕವನ್ನು ಸ್ವೀಕರಿಸಿದ ಕೂಡಲೇ, ಇದಕ್ಕೆ ರಾಷ್ಟ್ರಪತಿಯವರ ದಸ್ಕತ್ತು ಬಿದ್ದ ಕೂಡಲೇ, ಕನ್ನಡ ಭಾಷೆ ರಾಜ್ಯದಾದ್ಯಂತ ಜಾರಿಗೆ ಬರಬೇಕು. ಈ ಕರಡು ಮಸೂದೆಯನ್ನು ನೋಡಿದರೆ, ಕನ್ನಡವನ್ನು ಹಂತ ಹಂತವಾಗಿ ಜಾರಿಗೆ ತರುವ ರೀತಿಯಲ್ಲಿದೆ. ಸರಕಾರದವರು ಹಂತ ಹಂತವಾಗಿ ರಾಜ್ಯ ಭಾಷೆಯನ್ನು ಜಾರಿಗೆ ತರುವುದಕ್ಕೆ ಕಾರಣವೇನು ? ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಗುಲ್ಬರ್ಗ ಜಿಲ್ಲೆಯಲ್ಲಿ ರಿಕಾರ್ಡುಗಳು ಉರ್ದುವಿನಲ್ಲಿವೆ. ಬೆಳಗಾಂ ಜಿಲ್ಲೆಯಲ್ಲಿ ಮರಾಠಿಯಲ್ಲಿ ಲೆಕ್ಕಪತ್ರಗಳಿವೆ. ಅದಕ್ಕೋಸ್ಕರ ಅವರೆಲ್ಲರೂ ಕನ್ನಡ ಕಲಿಯುವವರೆಗೆ, ಚೆನ್ನಾಗಿ ಅರಿಯುವವರೆಗೇ ಅಲ್ಲಿಯ ಭಾಷೆಯನ್ನು ಕನ್ನಡ ರಾಜ್ಯ ಭಾಷೆಯನ್ನಾಗಿ ಮಾಡುವುದಕ್ಕೆ ಹಿಂಜರಿಯುತ್ತೀರ ? ಅಥವಾ ಇನ್ನಾವುದಾದರೂ ಕಾರಣವಿದೆಯೋ, ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ತಮ್ಮ ಈ ವಿಧೇಯಕದಲ್ಲಿಯೇ ಹಂತ ಹಂತವಾಗಿ ಜಾರಿಗೆ ತರತಕ್ಕಂಥ ಯೋಜನೆಯನ್ನು ಇನ್ನೂ ಹೊಂದಿದ್ದೀರಿ. ತಮಗೆ ಮನಸ್ಸಿದ್ದರೆ ರಾಜ್ಯದ ಎಲ್ಲ ಕಡೆಯಲ್ಲಿಯೂ ವಿಧಾನ ಸಭೆ ಮೊದಲುಗೊಂಡು, ರೆವಿನ್ಯೂ ಇನ್‌ಸ್ಪೆಕ್ಟರು, ಜವಾನ ಎಲ್ಲ ವರ್ಗದವರೂ ಎಲ್ಲ ವ್ಯವಹಾರವನ್ನೂ ಕನ್ನಡದಲ್ಲಿಯೇ ಮಾಡಬೇಕು. ಅದಕ್ಕೋಸ್ಕರ ಸರಕಾರದವರು ಈ ದಿಶೆಯಲ್ಲಿ ಇನ್ನೂ ಸ್ವಲ್ಪ ಜಾಗರೂಕರಾಗಿ, ಹೆಚ್ಚು ದಕ್ಷತೆಯಿಂದ ಕೆಲಸಮಾಡಿ ಕನ್ನಡದಲ್ಲಿಯೇ ಎಲ್ಲ ವ್ಯವಹಾರವನ್ನೂ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಆಸೆ.

In Section 4, it is said : "The State Government may, from time to time, by notification in the Official Gazette, direct that Kannada shall be used in respect of such offiicial purposes and in such areas as may be specified in the notification." ಮುಖ್ಯ ಮಂತ್ರಿಗಳು ಆ ಅಫಿಷಿಯಲ್ ಪರ್ಪಸ್ಸುಗಳು ಯಾವುವು ಎಂದು ತಮ್ಮ ಭಾಷಣದಲ್ಲಿ ತಿಳಿಸಲಿಲ್ಲ. After all, it is a simple Bill ಎಂದು ಹೇಳಿಬಿಟ್ಟರೇ ವಿನಾ, ಅಫಿಷಿಯಲ್ ಪರ್ಪಸ್ಸುಗಳ ವಿವರಣೆ ಕೊಡಲಿಲ್ಲ. ನನ್ನ ಸ್ನೇಹಿತರಾದ ಶ್ರೀ ಶಿವಪ್ಪನವರು ಕೋರ್ಟುಗಳಲ್ಲಿ ಸಾಕ್ಷ್ಯವನ್ನು ಕನ್ನಡದಲ್ಲಿ ಬರೆದುಕೊಳ್ಳುವುದಿಲ್ಲ ಎಂದು ಹೇಳಿದರು. ಮುನಸೀಫ್ ಕೋರ್ಟಿನಲ್ಲಿಯೇ ಆಗಲಿ, ಮೇಜಿಸ್ಟ್ರೇಟ್ ಕೋರ್ಟಿನಲ್ಲಿಯೇ ಆಗಲಿ, ಡಿಸ್ಟ್ರಿಕ್ ಕೋರ್ಟಿನಲ್ಲಿಯೇ ಆಗಲಿ, ಎಲ್ಲಿಯೂ ಕನ್ನಡದಲ್ಲಿಯೇ ಎವಿಡೆನ್ಸು ಕೊಟ್ಟರೂ, ಇಂಗ್ಲೀಷಿನಲ್ಲಿಯೇ ರಿಕಾರ್ಡ್ ಮಾಡುತ್ತಾರೆ. ಯಾವುದಾದರೂ, ರಿಟನ್ ಡಾಕ್ಯುಮೆಂಟ್ಸ್ ಎಕ್ಸಿಬಿಟ್ಟಾಗಿ ಕೊಟ್ಟಿದ್ದರೆ ಮಾತ್ರ, ಅವುಗಳ ಕಾಪಿಯನ್ನು ಕನ್ನಡದಲ್ಲಿ ಕೊಡುತ್ತಾರೆ. ಮಿಕ್ಕದೆಲ್ಲಾ ಇಂಗ್ಲೀಷಿನಲ್ಲಿ ಇರುತ್ತದೆ. ನ್ಯಾಯಾಧೀಶರು ಬರೆದುಕೊಳ್ಳುವ ಅಂಕಿ ಅಂಶಗಳೆಲ್ಲಾ ಇಂಗ್ಲೀಷಿನಲ್ಲಿಯೇ ಇರುತ್ತವೆ. ಆ ಪದ್ಧತಿಯನ್ನು ಬದಲಾಯಿಸುವುಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರ ? ಈಗಾಗಲೇ ಇಂಥಿಂಥ ಜಿಲ್ಲೆಯಲ್ಲಿ ಕನ್ನಡದಲ್ಲಿಯೇ ವ್ಯವಹಾರ ನಡೆಯಬೇಕು ಎಂದು ಆಜ್ಞೆ ಮಾಡಿದ್ದೀರ. ಆದರೆ ಅಲ್ಲಿ ಕನ್ನಡದಲ್ಲಿ ವ್ಯವಹಾರ ನಡೆಯುತ್ತಿಲ್ಲ, ಅದನ್ನು ಸರಿಪಡಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರ ?

ಇನ್ನು ಕ್ಲಾಜು 4 ಸ್ವಲ್ಪ ಅನುಮಾನಕ್ಕೆ ಎಡೆ ಕೊಟ್ಟಿದೆ. ಕನ್ನಡವನ್ನು ವ್ಯವಹಾರ ಭಾಷೆಯಾಗಿ ಮಾಡುವುದಕ್ಕೆ ಮುಖ್ಯ ಮಂತ್ರಿಗಳಿಗೆ ಮನಸ್ಸು ಇಲ್ಲ ಎನ್ನುವುದನ್ನು ಇದು ತೋರಿಸುತ್ತದೆ. ಈ ಬಿಲ್ಲು ಅಂಗೀಕರಿಸಿದ ತಕ್ಷಣ ಮೈಸೂರಿನಾದ್ಯಂತ ಯಾವ ಉದ್ದೇಶಕ್ಕೇ ಆಗಲಿ, ಕನ್ನಡವನ್ನು ರಾಜ್ಯ ಭಾಷೆಯಾಗಿ ಉಪಯೋಗಿಸುವಂತೆ ಮಾಡುವುದು ಒಳ್ಳೆಯದು ಎಂದು ಹೇಳಬೇಕಾಗಿದೆ. ಈ ಮಸೂದೆ ಸ್ವೀಕೃತವಾದ ಮೇಲೆ, ಎಷ್ಟು ಅಡಚಣೆಗಳು, ತಕರಾರು ಉದ್ಭವಿಸುತ್ತವೋ ಗೊತ್ತಿಲ್ಲ.

ಅಧ್ಯಕ್ಷರು.—ಆಗ ನೋಡೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೋಸ್ಕರ ಇಲ್ಲಿ ಕೆಲವು ಅಮೆಂಡುಮೆಂಟುಗಳನ್ನು ಕೂಡ ನೋಡಿದ್ದೇನೆ.

Mr. SPEAKER.—They are not moved yet.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿ ನಗರ).—ಮಾನ್ಯ ಅಧ್ಯಕ್ಷರೇ, ಕನ್ನಡ ಭಾಷೆಯನ್ನು ರಾಜ್ಯದ ಅಧಿಕೃತ ಆಡಳಿತ ಭಾಷೆಯನ್ನಾಗಿ ಅಂಗೀಕರಿಸಬೇಕೆಂಬುದಾಗಿ ಮಂಡಿಸಿರುವ ಈ ವಿಧೇಯಕವನ್ನು ನಾನು ಮೊಟ್ಟಮೊದಲನೆಯದಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ವಿಳಂಬವಾದರೂ ಚಿಂತೆಇಲ್ಲ. ಕನ್ನಡಿಗರ ಬಹುದಿನದ ಬೇಡಿಕೆಯನ್ನು ಸರ್ಕಾರದವರು ಮನ್ನಿಸಿದ್ದಕ್ಕಾಗಿ ಆಡಳಿತವರ್ಗಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗ ಕನ್ನಡಿಗರ ಬಹುದಿನದ ಬಯಕೆ ಕನಸು ನನಸಾದಂತಾಯಿತು. ''ಏನೋ ಪ್ರಜೆಗಳು ಕೇಳುತ್ತಿದ್ದರು, ನಾವು ಏನೋ ಈ ಬಗ್ಗೆ ಕಾನೂನನ್ನು ಜಾರಿಗೆ ತಂದಿದ್ದೇವೆ'' ಎಂದು ಆಡಳಿತವರ್ಗ ನಿರ್ಲಕ್ಷ್ಯದಿಂದಿದ್ದರೆ, ಇಂತಹ ಕಾನೂನುಗಳು ಜಾರಿಗೆ ಬಂದರೂ ನಿಜವಾಗಿ ಏನೂ ಉಪಯೋಗವಿಲ್ಲ. ಮಾತೃಭಾಷೆಯನ್ನು ರಾಜ್ಯ ಭಾಷೆಯಾಗಿ ಬಳಕೆಗೆ ತರಲು ಹೆಚ್ಚಾಗಿ ಆಡಳಿತವರ್ಗ ಮೇಲಾಗಿ ಪ್ರಜೆಗಳು ಪ್ರಯತ್ನಿಸಿದರೆ ಹಾಗೂ ಸಹಕರಿಸಿದರೆ ಮಾತ್ರ ಈ ಶಾಸನ ಯಶಸ್ವಿಯಾಗಬಲ್ಲುದು. ಆರಂಭಶೂರತ್ವ ಬಿಟ್ಟು ಕರ್ತವ್ಯಶೂರರಾಗಿ ಈ ವಿಧೇಯಕವನ್ನು ಆಚರಣೆಗೆ ತರರೆಂದು ಸಂಬಂಧಪಟ್ಟವರಲ್ಲಿ ವಿನಂತಿಸುತ್ತೇನೆ.

ಈ ವಿಧೇಯಕದಲ್ಲಿ ಒಂದು ಉಪನಿಬಂಧನೆಯನ್ನು ಸೇರಿಸಲೇಬೇಕಾಗಿತ್ತು. ಆಡಳಿತದಲ್ಲಿರುವ ಪ್ರತಿಯೊಬ್ಬರೂ ದಿವಾನರೇ ಆಗಿರಲಿ ಅಥವಾ ಜವಾನರೇ ಆಗಿರಲಿ ಕನ್ನಡಭಾಷೆಯನ್ನು ಕಡ್ಡಾಯವಾಗಿ ತಿಳಿದಿರಬೇಕೆಂಬ ಒಂದು ನಿಯಮ ಇರಲೇಬೇಕಾಗಿತ್ತು. ಕೆಲವರಿಗೆ, ಕನ್ನಡವೆಂದರೆ ಏನೋ ಒಂದುವಿಧವಾದ ತಿರಸ್ಕಾರ. ಇಂಗ್ಲೀಷೆಂದರೆ ಏನೋ ಒಂದು ವಿಧವಾದ ದುರಭಿಮಾನವಿದೆಯೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ.

''ಎನಕು ಕನಡಿ ಭಾಷೆ ತೆರಿಯಾದು,'' ''ಐ ಕೆನ್ ಅಂಡರ್‌ಸ್ಟ್ಯಾಂಡ್, ಬಟ್ ಕಾಂಟ್ ಸ್ಪೀಕ್'' ಎಂದು ಹೇಳುವವರು ಇಂದು ಆಡಳಿತವರ್ಗದಲ್ಲಿ ಬಹಳ ಜನರಿದ್ದಾರೆ. ''ಸ್ವಾಮಿ, ಮುಂಗಾರು ಮಳೆ ಹಿಂದ್ಲೇಟು ಹೊಡೀತು. ಹಿಂಗಾರು ಮಳೆ ಕೈಕೊಡ್ತು, ಕಂದಾಯದಲ್ಲಿ ರಿಯಾಯ್ತಿ ಆಗಬೇಕು'' ಎಂಬುದಾಗಿ ರೈತರು ಅಧಿಕಾರಿಗಳಮುಂದೆ ಬಂದು ಕೇಳಿಕೊಂಡಾಗ, ಆರೀತಿ ಮನವಿ ಮಾಡಿಕೊಂಡರೆ, ''ಐ ಕಾಂಟ್ ಅಂಡರ್‌ಸ್ಟಾಂಡ್ ವಾಟ್ ದೀಸ್ ಫೆಲೋಸ್ ಆರ್ ಟಾಕಿಂಗ್'' ಎಂದು ಹೇಳುವ ಅಧಿಕಾರಿಗಳು ಇದ್ದಾರೆ. ಆದ್ದರಿಂದ ಇಂತಹ ವಿಧೇಯಕಗಳು ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ; ಏನೂ ಉಪಯೋಗವಾಗುವುದಿಲ್ಲ. ಈಗ ಹಾಲಿ ಇರತಕ್ಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಕನ್ನಡವನ್ನು ತುಂಬಾ ಅಭಿಮಾನದಿಂದ ಅಭ್ಯಾಸಿಸುತ್ತಿದ್ದಾರೆಂಬುದು ಬಹಳ ಸಂತೋಷದ ವಿಚಾರ. ಇಂತಹ ಅಧಿಕಾರಿಗಳು ನಮ್ಮಲ್ಲಿ ಹೆಚ್ಚಬೇಕು ಮತ್ತು ಇಂತಹ ಅಭಿಮಾನ ಕನ್ನಡ ಬಾರದ ಮಂತ್ರಿಗಳಲ್ಲೇ ಆಗಲಿ, ಅಧಿಕಾರಿಗಳಲ್ಲೇ ಆಗಲಿ ಬೆಳೆಯಲೆಂದು ನಾನು ಹಾರೈಸುತ್ತೇನೆ.

ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಸೂಚಿಸಲೇ ಬೇಕಾಗಿದೆ. ಸರ್ಕಾರದವರ ಕೆಲವು ಕನ್ನಡ ಭಾಷಾಂತರಗಳನ್ನು ಅರ್ಥಮಾಡಿಕೊಳ್ಳಲು ಮತ್ತೊಬ್ಬ ಪಂಡಿತರು ಬೇಕಾಗುವಷ್ಟು ಕಠಿಣವಾಗಿರುವುವು ಎಷ್ಟೋ ನನ್ನ ದೃಷ್ಟಿಗೆ ಬಿದ್ದಿವೆ. ಸರ್ಕಾರದ ಭಾಷಾಂತರಗಳು ಸರಳ ಶೈಲಿಯಲ್ಲಿದ್ದು ಪಂಡಿತ ಪಾಮರರಿಗೂ ಅರ್ಥವಾಗುವಂತಿರಬೇಕು. ಉದಾಹರಣೆಗಾಗಿ ಈ ವಿಧೇಯಕದ 6ನೇ ಪ್ರಕರಣದಲ್ಲಿ ಒಂದು ಉಕ್ಕಿನ ಕಡಲೆಯಂತಹ ಭಾಷಾಂತರವನ್ನು ಮಾಡಿರುವುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ''ಈ ಅವಧಿಯು ಒಂದು ಅಧಿವೇಶನದಲ್ಲಾಗಲೀ ಅಥವಾ ಒಂದಾದಮೇಲೆ ಮತ್ತೊಂದರಂತೆ ನಡೆಯುವ ಎರಡು ಅಧಿವೇಶನಗಳಲ್ಲಾಗಲೀ ಅಡಕವಾಗಿರಬಹುದು. ಮತ್ತು ಅದು ಹಾಗೆ ಮಂಡಿಸಲ್ಪಟ್ಟ ಅಧಿವೇಶನವು ಮುಕ್ತಾಯವಾಗುವುದರೊಳಗೆ ಅಥವಾ ನಿಕಟೋತ್ತರದ'' ಇದು ಜನ ಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ನಮಗೇ ಅರ್ಥವಾಗಿರುವುದಿಲ್ಲ. ''ಸಂಬಂಧಪಟ್ಟ''ವೆಂದು ಇದ್ದಿದ್ದರೆ ಬಹಳ ಚೆನ್ನಾಗಿತ್ತು. ಇನ್ನು ಮುಂದೆ ನೋಡುತ್ತಾ ಹೋದರೆ...''ಅಧಿವೇಶನವು ಮುಕ್ತಾಯವಾಗುವುದರೊಳಗೆ, ಆ ಅಧಿಸೂಚನೆಯಲ್ಲಿ ಯಾವುದಾದರೂ ಮಾರ್ಪಾಟು ಮಾಡುವ ಬಗ್ಗೆ ಉಭಯ ಸದನಗಳೂ ಒಪ್ಪಿದರೆ ಅಥವಾ ಅಧಿಸೂಚನೆಯು ಸಾದರಮಾಡಲ್ಪಡಕೂಡದೆಂದು...'' ಎಂಬುದಾಗಿ ಹೇಳಿದ್ದಾರೆ. ಅದಕ್ಕೆ ಬದಲು ''ಜಾರಿಗೆ ತರಕೂಡದು'' ಎಂಬುದಾಗಿ ಭಾಷಾಂತರಿಸಿದ್ದರೆ ಬಹಳ ಚೆನ್ನಾಗಿತ್ತು. ಮುಂದೆ ''ಪರಿಣಾಮರಹಿತ'' ಎಂಬ ಕಠಿಣಶಬ್ದವನ್ನು ಬೇರೆ ಉಪಯೋಗಿಸಿದ್ದಾರೆ. ಇವನ್ನೆಲ್ಲಾ ಓದಬಹುದು. ಆದರೆ ಅರ್ಥವಾಗದಿದ್ದರೆ ಅಂತಹ ಪದಗಳನ್ನು ಉಪಯೋಗಿಸಿಯೂ ಪ್ರಯೋಜನವಿಲ್ಲ. ಆದ್ದರಿಂದ ಸಣ್ಣ ಸಣ್ಣ ಪದಗಳನ್ನುಪಯೋಗಿಸಿ ತಿಳಿಗನ್ನಡದಲ್ಲಿ ಭಾಷಾಂತರಿಸಿದರೆ ಎಲ್ಲರಿಗೂ ಸುಲಭವಾಗಿ ಅರ್ಥವಾಗುತ್ತದೆ. ''ಕೃತ್ಯ'' ಎಂಬ ಪದವನ್ನು ಬೇರೆ ಕೊನೆಯಲ್ಲಿ ಹೇಳಿದ್ದಾರೆ.

ಕೃತ್ಯ ಅಂದರೆ ಕೆಲಸ ಹೀಗೆ ಎಷ್ಟೋ ಭಾಷಾಂತರಗಳು ಮಕ್ಕಿಕಾಮಕ್ಕಿ ಆಗಿಹೋಗಿವೆ. ಇದರಿಂದ ಪ್ರಜೆಗಳಿಗೆ ಸುಲಭವಾಗಿ ಅರ್ಥವಾಗುವುದಿಲ್ಲ. ಕೆಲವು ವೇಳೆ ನಮಗೂ ಅರ್ಥವಾಗುವುದಿಲ್ಲ. ಇದರಿಂದ ಪ್ರಜೆಗಳಿಗೆ ನೀರಿಳಿಯದ ಗಂಟಲಿಗೆ ಕಡುಬು ತುರುಕಿದಂತಾಗುವುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗಣೇಶನಿಗೆ ಕಡುಬು.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಈ ಸಂದರ್ಭದಲ್ಲಿ ನನಗೆ ಒಂದು ಸಣ್ಣ ಕಥೆ ಜ್ಞಾಪಕಕ್ಕೆ ಬರುತ್ತದೆ ಅದೇನೆಂದರೆ ಒಬ್ಬಾತ ಕೆಲವು ಶ್ಲೋಕಗಳ ಪಂಡಿತನಾಗಿದ್ದ. ಆತ ಒಮ್ಮೆ ಮಾವನ ಮನೆಗೆ ಹೋದ. ಅಲ್ಲಿ ಆತನಿಗೆ ''ಉಚ್ಛಸ್ಥಾನೇಷು ಪೂಜ್ಯಂತೇ'' ಎಂಬ ಶ್ಲೋಕ ಜ್ಞಾಪಕಕ್ಕೆ ಬಂದಿತು. ಸರಿ ಮಾವನಮನೆಯಲ್ಲಿ ದವಸಹಾಕಿದ್ದ ಬಿದಿರುಕಣಜ ಒಂದಿತ್ತು. ಅದರ ಮೇಲೆ ಕುಳಿತ. ಅನಂತರ ಅಳಿಯಂದಿರು ಸ್ನಾನಕ್ಕೆ ಹೋದರು. ಸಾಗರಸ್ನಾನಂ ಮಹಾಶ್ರೇಷ್ಠಂ, ನದೀಸ್ನಾನಂಚ ಮಧ್ಯಮಂ, ತಟಾಕಸ್ನಾನಂ ಅಧಮಂಚೈವ'' ಎಂಬ ಶ್ಲೋಕ ಜ್ಞಾಪಕಕ್ಕೆ ಬಂದು ಬಚ್ಚಲಮೋರಿಯನ್ನು ಬಂಧಿಸಿ ನೀರನ್ನೆಲ್ಲಾ ಬಚ್ಚಲಿಗೆ ಚೆಲ್ಲಿ ಅದರಲ್ಲಿ ಕುಳಿತುಕೊಂಡು ಸ್ನಾನಮಾಡಿದ. ಅಳಿಯಂದಿರ ಈ ವರ್ತನೆಯನ್ನೆಲ್ಲಾ ನೋಡಿ ಎಲ್ಲರೂ ನಗುತ್ತಿದ್ದರು. ಕೊನೆಗೆ ಬುದ್ಧಿಶಾಲಿನಿಯಾದ ಆತನ ಪತ್ನಿ ತನ್ನಗಂಡನ ಶತಶ್ಲೋಕ ಪಂಡಿತ ತನವನ್ನು ಬಿಡಿಸಿ ಸರಿಯಾದ ಬುದ್ಧಿ ಹೇಳಿದಳಂತೆ. ಈ ರೀತಿಯಾಗಿ ಈಗಿನ ಕೆಲವು ಪಂಡಿತರುಗಳು ಭಾಷಾಂತರ ಕಾರ್ಯವನ್ನು ಕೈಕೊಂಡರೆ ನಿಜವಾಗಿ ಹೆಚ್ಚಿನ ಅನರ್ಥಗಳಾಗುವ ಸಂಭವವೂ ಉಂಟು. ಆದ್ದರಿಂದ ಜನಸಾಮಾನ್ಯರೆಲ್ಲರಿಗೂ ಸುಲಭವಾಗಿ ಅರ್ಥವಾಗುವ ವ್ಯವಹಾರಿಕ ಶೈಲಿಯಲ್ಲಿ ಭಾಷಾಂತರಗಳು ಇರಬೇಕೆಂಬುದಕ್ಕೆ ನಾನು ಈ ಉದಾಹರಣೆಯನ್ನು ಈ ಸಂದರ್ಭದಲ್ಲಿ ಈ ಸಭೆಯಲ್ಲಿ ಹೇಳುತ್ತಿದ್ದೇನೆ.

ಯಾರಿಗೇ ಆಗಲಿ ತಮ್ಮ ಭಾಷೆಯಮೇಲೆ ಅಭಿಮಾನವಿರಬೇಕೇಹೊರತು ದುರಭಿಮಾನ ವಿರಬಾರದು. ಕನ್ನಡ ಬಲ್ಲ ಕೆಲವು ಸೋದರರು ಕನ್ನಡಿಗರೊಂದಿಗೆ ಮಾತನಾಡಬೇಕಾದರೆ ತಮ್ಮ ಮಾತೃಭಾಷೆಯಲ್ಲಿ ಅಥವಾ ಪರಭಾಷೆಯಲ್ಲಿ ಮಾತನಾಡುತ್ತಿದ್ದಾರೆಯೇ ಹೊರತು ಸೋದರ ಭಾಷೆಯ ಮೇಲೆ ಪ್ರೇಮ ತೋರಿಸುವುದಿಲ್ಲ. ಇಂತಹ ಭಾಷಾ ದುರಭಿಮಾನ ಕನ್ನಡಿಗರಲ್ಲಿ ನಿಜವಾಗಿ ಬೆಳೆಯಬಾರದೆಂದು ನಾನು ಹಾರೈಸುತ್ತೇನೆ. ಒಟ್ಟಿನಲ್ಲಿ ಈ ವಿಧೇಯಕ ಶಾಸನವಾದ ನಂತರ ಕಾಯಾ, ವಾಚಾ, ಮನಸಾ ಇದನ್ನು ಪ್ರಚಾರಕ್ಕೆ ತರಲೆಂದು ವಿನಂತಿಸುತ್ತೇನೆ. ಈಗಾಗಲೇ ನನ್ನ ಮಿತ್ರರಾದ ಶ್ರೀಮಾನ್ ಮುಕ್ಕಣ್ಣಪ್ಪನವರು ಒಂದು ಶ್ಲೋಕವನ್ನು ಹೇಳಿದ ಪ್ರಕಾರ ''ಸುಲಿದ ಬಾಳೆಯಹಣ್ಣಿನಂದದಿ, ಕಳೆದ ಚಿಗುರಿನ ಕಬ್ಬಿನಂದದಿ, ಲಲಿತ ಉಷ್ಣದ ಹಾಲನಂದದಿ ಸುಲಭವಾಗಿರ್ಪ, ಲಲಿತವಹ ಕನ್ನಡದ ನುಡಿಯನು, ತಿಳಿದುಕೊಂಡು ತನ್ನ ಸೌಖ್ಯವ ಗಳಿಸಿಕೊಂಡರೆ ಸಾಲದೆ ಪರಭಾಷೆಯಲ್ಲೇನು ?'' ಎಂಬಂತೆ ನಮ್ಮ ವ್ಯವಹಾರಗಳಿಗೆ ನೆರವಾಗುವ ಈ ವಿಧೇಯಕವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

†ಶ್ರೀ ಮಹಂತಸ್ವಾಮಿ ವಿರೂಪಾಕ್ಷಯ್ಯ (ಷಹಪೂರ್).—ಅಧ್ಯಕ್ಷರೆ, ಈ ಬೃಹತ್ ಸಭೆಯಲ್ಲಿ ಈಗ ಮಂಡಿಸಲ್ಪಟ್ಟಿರತಕ್ಕಂಥ ಮಸೂದೆಯೇನಿದೆ ಅದರ ಉದ್ದೇಶ ಈ ಕನ್ನಡ ರಾಜ್ಯದಲ್ಲಿ ರಾಜ್ಯಭಾಷೆ ಅಥವಾ ಸರ್ಕಾರಿ ಭಾಷೆ ಕನ್ನಡವಾಗಿರಬೇಕೆಂಬುದು ಆಗಿದೆ. ಇದನ್ನು ಈ ಸಂರ್ಭದಲ್ಲಿ ಮಂಡಿಸಿದ್ದೇನೋ ಸರಿ. ನಮ್ಮ ಈ ನಾಡಿನಲ್ಲಿ ವಾಸಿಸತಕ್ಕಂಥ ಸುಮಾರು 240 ಲಕ್ಷ ಜನ ಮಾತನಾಡುವುದು ಕನ್ನಡ ಭಾಷೆಯೇ ಹೆಚ್ಚು. ಅದು ರಾಜ್ಯ ಭಾಷೆಯಾಗಿರಬೇಕು. ಬಹಳ ದಿವಸಗಳ ಹಿಂದೆಯೇ ಕನ್ನಡ ರಾಜ್ಯಭಾಷೆಯಾಗಬೇಕಾಗಿತ್ತು. ಈಗಲಾದರೂ ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡಬೇಕೆನ್ನುವ ಮಸೂದೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಬೃಹತ್ ಸಭೆಯಲ್ಲಿ ತಂದಿರುವುದರಿಂದ ಅವರನ್ನು ಅಭಿನಂದಿಸುತ್ತೇನೆ. ನಾನು ಮತ್ತು ನನ್ನ ಪಕ್ಷ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆಂದು ತಿಳಿಸಿ ಈ ವಿಧೇಯಕದ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಸ್ವಾಮಿ, ಈ ಕನ್ನಡ ಭಾಷೆಯ ವಿಚಾರವನ್ನು ಇತಿಹಾಸದ ದೃಷ್ಟಿಯಿಂದ ನೋಡಿದರೆ ಮಹನ್ ಸಾಮ್ರಾಟರ ಕಾಲದಿಂದಲೂ ಅಂದರೆ 4,5,6,7 ಮತ್ತು 12ನೇ ಶತಮಾನದ ರಾಷ್ಟ್ರಕೂಟರ ಕಾಲಕ್ಕೆ ಮತ್ತು ಚಾಲುಕ್ಯರ ಕಾಲಕ್ಕೆ ಕನ್ನಡ ಭಾಷೆಯನ್ನು ರಾಜ್ಯ ಭಾಷೆಯನ್ನಾಗಿ ಮಾಡಿದ್ದರು. ಆಮೇಲೆ ಸುಮಾರು 14ನೇ ಶತಮಾನದ ಆದಿಯಿಂದ 17ನೇ ಶತಮಾನದವರೆಗೆ ವಿಜಯನಗರ ಸಾಮ್ರಾಟರ ಕಾಲದಲ್ಲಿ ಕನ್ನಡ ಮತ್ತು ತೆಲಗು ಎರಡು ಭಾಷೆಗಳು ರಾಜ್ಯಡಳಿತದಲ್ಲಿದ್ದರೂ ಆಗಿನ ಸಾಮ್ರಾಟರು ಕನ್ನಡ ಭಾಷೆಯನ್ನೆ ರಾಜ್ಯಭಾಷೆಯನ್ನಾಗಿ ಮಾಡಿದ್ದರು. ಅದೂ ಅಲ್ಲದೆ ರಾಜ್ಯದಿಂದ ರಾಜ್ಯಕ್ಕೆ, ಜಿಲ್ಲೆಯಿಂದ ಜಿಲ್ಲೆಗೆ, ಪ್ರಾಂತ್ಯಗಳಿಂದ ಪ್ರಾಂತ್ಯಗಳಿಗೆ ಮತ್ತು ತಾಲ್ಲೂಕುಗಳಿಂದ ತಾಲ್ಲೂಕುಗಳಿಗೆ—ಹೀಗೆ ಎಲ್ಲೆಲ್ಲೂ ಕನ್ನಡದಲ್ಲಿಯೇ ಕಾಗದ ಪತ್ರಗಳನ್ನು ಕಳುಹಿಸುವ ಏರ್ಪಾಡನ್ನು ವಿಜಯನಗರದ ಸಾಮ್ರಾಟರು ಮಾಡಿಕೊಂಡಿದ್ದರು.

(ಶ್ರೀ ಮಹಂತಸ್ವಾಮಿ ವಿರೂಪಾಕ್ಷಯ್ಯ)

4-30 P.M.

ಇಂಥ ಪರಿಸ್ಥಿತಿಯಲ್ಲಿ ನಮ್ಮ ಭಾಷೆ ರಾಜ್ಯ ಭಾಷೆಯಾಗಬೇಕು, ರಾಜ್ಯ ಭಾಷೆಯಾಗುವುದರಿಂದ ಏನು ಲಾಭ ಎನ್ನುವುದನ್ನು ಬಹಳ ದಿವಸಗಳಿಂದಲೂ ಯೋಚಿಸಿ ನಿರೀಕ್ಷೆ ಮಾಡುತ್ತಿದ್ದೆವು. ಈಗ ಪರಿಪಕ್ವವಾದ ಕಾಲ ಬಂದಿದೆ; ಈ ಕಾಲದಲ್ಲಿ ಈ ಭಾಷೆಯನ್ನು ರಾಜ್ಯ ಭಾಷೆಯಾಗಿ ಮಾಡಿಕೊಂಡು ನಮ್ಮ ವ್ಯವಹಾರಗಳಲ್ಲಿ, ಸರ್ಕಾರಿ ಕಾಗದ ಪತ್ರಗಳಲ್ಲಿ ಇದನ್ನಳವಡಿಸಿಕೊಂಡು ನಮ್ಮ ಆಡಳಿತವನ್ನು ಸುಗಮಗೊಳಿಸಿಕೊಳ್ಳುವುದು ಅತ್ಯುತ್ತಮ ಮಾರ್ಗ, ಸುಮಾರು ಹದಿನಾರು ಹದಿನೇಳನೆಯ ಶತಮಾನದಿಂದ ನಮ್ಮ ಹೈದರಾಬಾದು ಕರ್ಣಾಟಕದ ಬಹುಭಾಗ ಎಂದರೆ ಬಿದರೆ, ಗುಲ್ಬರ್ಗ, ರಾಯಚೂರು ಜಿಲ್ಲೆಗಳು ಉರ್ದು ಆಧಿಪತ್ಯಕ್ಕೊಳಗಾಗಿ, ಈ ಮೂರು ಜಿಲ್ಲೆಗಳಲ್ಲಿ ಉರ್ದು ರಾಜ್ಯ ಭಾಷೆಯಾಗಿ, ಹೈದರಾಬಾದಿನಿಂದ ಜಿಲ್ಲಾ ಮಟ್ಟ, ತಾಲ್ಲೂಕಾ ಮಟ್ಟ, ಹಳ್ಳಿ ಮಟ್ಟ, ಗೌಡ, ಕುಲಕರ್ಣಿ ಶಾನುಭೋಗರುಗಳವರೆಗೂ ಉರ್ದು ಭಾಷೆಯಲ್ಲಿಯೇ ಕಾಗದ ಪತ್ರಗಳನ್ನು ಬರೆಯುತ್ತಿದ್ದರು. ಈಗ ಹದಿನೈದು ವರ್ಷಗಳ ಹಿಂದೆ ಇಂಥ ಸನ್ನಿವೇಶ ಬಾರದೇ ಇರುವ ಹಾಗೆ ಪ್ರಯತ್ನ ಮಾಡಿದ್ದರಿಂದ ಕನ್ನಡ ಭಾಷೆಯ ಪರಿಪಾಠವಾಗಿ ಸೇಕಡ ಐದು ಹತ್ತರಷ್ಟು ಜನರಾದರೂ ಕನ್ನಡ ಬರೆಯುವ ಸನ್ನಿವೇಶ ಬಂದಿದೆ. ಹೀಗೆಯೇ ಬೊಂಬಾಯಿ ಕರ್ಣಾಟಕದ ಕೆಲವು ಭಾಗಗಳಲ್ಲಿ, ಅದರಲ್ಲಿಯೂ ಬೆಳಗಾವ್ ಪ್ರದೇಶದಲ್ಲಿ ಮರಾಠಿ ಜನರ ಒತ್ತಡದಿಂದ ಜಿಲ್ಲಾ, ತಾಲ್ಲೂಕು, ಹಳ್ಳಿಯ ಗೌಡ, ಶ್ಯಾನುಭೋಗರವರೆಗೂ ಮರಾಠಿ ಭಾಷೆಯಲ್ಲಿಯೇ ದಫ್ತರವನ್ನು ಬರೆಯುತ್ತ ಬಂದಿದ್ದಾರೆ. ಬಿಜಾಪುರದಲ್ಲಿಯೂ ಸುಮಾರು ಹದಿನೈದು ವರ್ಷಗಳಹಿಂದೆ ಈ ಭಾಷೆಯಿತ್ತು. ನಮ್ಮ ಜಿಲ್ಲೆಯಲ್ಲಿ ಸುಮಾರು ಇಪ್ಪತ್ತು ಮೂವತ್ತು ಹಳ್ಳಿಗಳಲ್ಲಿ ಈ ಭಾಷೆಯನ್ನು ಈಗಲೂ ಉಪಯೋಗ ಮಾಡುತ್ತಿದ್ದಾರೆ. ಬಹು ಜನರಿಗೆ, ಎಂದರೆ ಸೇಕಡ 90ರಷ್ಟು ಜನರಿಗೆ ತಿಳಿಯತಕ್ಕ ಭಾಷೆ ಜನರ ಭಾಷೆ ರಾಜ್ಯ ಭಾಷೆಯಾಗಿ ಅವರ ಮೇಲೆ ಒಳ್ಳೆಯ ಪರಿಣಾಮವಾಗುವ ವಿಷಯ ಬಹಳ ಮುಖ್ಯವಾದುದು. ನಮ್ಮ ಹೈದರಾಬಾದು ಕರ್ಣಾಟಕದಲ್ಲಿ ಉರ್ದು ಭಾಷೆ ಜಾರಿಯಲ್ಲಿದ್ದಾಗ ಅಲ್ಲಿ ಒಂದು ಹಳ್ಳಿಯಲ್ಲಿದ್ದವನಿಗೆ ಮುನ್‌ಸೀಫ್ ಕೋರ್ಟಿನಿಂದ ಒಂದು ಸಮನ್ಸ್ ಬಂತು. ಆ ಸಮನ್ಸ್‌ನಲ್ಲಿ ಉರ್ದುವಿನಲ್ಲಿ ಗಿರಿಯಪ್ಪ ಎಂದಿತ್ತು. ಅದನ್ನು ಜಾರಿಮಾಡಲು ಬಂದ ಪೋಲೀಸ್ ಕಾನ್‌ಸ್ಟೇಬಲ್ ಅದನ್ನು ತೆಗೆದುಕೊಂಡು ಹೋಗಿ ಅಲ್ಪ ಸ್ವಲ್ಪ ಓದಲು ಬರುತ್ತಿದ್ದ ಮನುಷ್ಯನಿಂದ ಓದಿಸಿದ. ಅವನು ಗುರಪ್ಪ ಎಂದು ಓದಿದ. 'ಗಿರಿಪ್ಪಾಕಿ ಗುರಪ್ಪಾಕಿ ಪಕಡೊ' ಎಂದು ಹೇಳಿದ. ಹೀಗೆ ಬಹು ಜನರಿಗೆ ತಿಳಿಯುವ ಭಾಷೆಯನ್ನು ಬಿಟ್ಟು ಕೇವಲ ಸೇಕಡ ಹತ್ತರಷ್ಟು ಜನರಿಗೆ ತಿಳಿಯುವ ಭಾಷೆಯನ್ನು ರಾಜ್ಯ ಭಾಷೆ ಮಾಡಿದರೆ ಇಂಥ ಅನಾಹುತಗಳಿಗೆ ಕಾರಣವಾಗುತ್ತದೆ. ಈ ದೃಷ್ಟಿಯಿಂದ ಹಳ್ಳಿಯಲ್ಲಿ ವಾಸಮಾಡುವ ರೈತನಿಗೆ ತಿಳಿಯುವ ಭಾಷೆ ಸಾಮಾನ್ಯ ಅಧಿಕಾರಿಗೂ ತಿಳಿಯಬೇಕು, ಪ್ರತಿನಿಧಿಗೂ ತಿಳಿಯಬೇಕು. ಹಳ್ಳಿಯಲ್ಲಿ ವಾಸಮಾಡುವ ಒಕ್ಕಲಿಗ ತನ್ನ ಮನಸ್ಸಿನಲ್ಲಿರತಕ್ಕ ಸುಖದುಃಖಗಳನ್ನು ನೇರವಾಗಿ ಅಧಿಕಾರಿಗೆ ಹೇಳುವಂತಿರಬೇಕು. ಅದನ್ನು ಅಧಿಕಾರಿ ತಿಳಿದುಕೊಂಡು ಲೋಪದೋಷಗಳನ್ನು ಸರಿಪಡಿಸಲು ಸಹಾಯವಾಗಬೇಕೆಂಬ ತತ್ವ ಅಡಗಿದೆ. ಈ ದೃಷ್ಟಿಯಿಂದ ಬಹುದಿವಸಗಳ ಬಯಕೆ ಈಡೇರತಕ್ಕ ಸನ್ನಿವೇಶ ಇಂದು ಈ ಬೃಹತ್ ಸಭೆಯಲ್ಲಿ ಬಂದಿದೆ. ಮುಖ್ಯಮಂತ್ರಿಗಳು ರಾಜ್ಯ ಭಾಷೆ ಕನ್ನಡವಾಗಬೇಕೆಂದು ಇದನ್ನು ತಂದಿದ್ದಾರೆ. ಕನ್ನಡ ಭಾಷೆ ಪ್ರತಿ ಹಳ್ಳಿಯಲ್ಲಿಯೂ ಬೆಳೆದು ನಮ್ಮ ವಿಧಾನಸೌಧದಿಂದ ಕನ್ನಡದಲ್ಲಿ ಹೊರಟ ಕಾಗದ ಪತ್ರ ಡಿವಿಜನಲ್ ಆಫೀಸರ ಕಚೇರಿ, ಡೆಪ್ಯುಟಿ ಕಮಿಷನರ ಕಚೇರಿ, ತಹಸೀಲ್‌ದಾರರ ಕಚೇರಿಯವರೆಗೂ ಮುಟ್ಟಬೇಕು. ಹಾಗೆಯೇ ಶಾನುಭೋಗರು ಕನ್ನಡದಲ್ಲಿ ಬರೆದ ಪತ್ರಗಳು ಸರ್ಕಾರಕ್ಕೆ ಹೋಗಬೇಕು. ಈ ವಿಧೇಯಕ ಉತ್ತಮವಾಗಿದೆ. ಈ ಕರ್ಣಾಟಕ ರಾಜ್ಯಕ್ಕೆ ಕನ್ನಡ ರಾಜ್ಯ ಭಾಷೆಯಾಗಬೇಕೆಂದು ಈ ಮಸೂದೆಯನ್ನು ತಂದಿರುವುದು ಸೂಕ್ತ. ಕನ್ನಡ ಭಾಷೆ ಮಾಧ್ಯಮಿಕ ಭಾಷೆಯಾಗಬೇಕು. ಆಮೇಲೆ ಇಂಗ್ಲಿಷ್ ಮತ್ತು ಹಿಂದಿಗೆ ಸ್ಥಾನ. ಹಿಂದಿ ಕೂಡ ಉತ್ತರ ಭಾರತದಲ್ಲಿ ಪ್ರಚಲಿತ ಭಾಷೆಯಾಗಿದೆ. ದಕ್ಷಿಣ ಭಾರತದಲ್ಲಿ ನಾಲ್ಕೈದು ಭಾಷೆಗಳು ಬಳಕೆಯಲ್ಲಿದ್ದರೂ ನಮ್ಮ ಕರ್ಣಾಟಕದಲ್ಲಿ ಕನ್ನಡವೇ ಮುಖ್ಯ. ಹೀಗಿದ್ದರೂ ಈ ವಿಧಾನಸೌಧದಲ್ಲಿ ಮತ್ತು ವಿಧಾನ ಸಭೆಯಲ್ಲಿ ನಡೆಯತಕ್ಕ ವ್ಯವಹಾರಗಳಿಗೆ, ಸದ್ಯಕ್ಕೆ ಇಂಗ್ಲಿಷನ್ನು ಇಟ್ಟುಕೊಂಡಿರುವುದು ಸೂಕ್ತ. ಈ ಮಸೂದೆಯಲ್ಲಿರುವ ಕೆಲವು ನಿಯಮಗಳನ್ನು ನೋಡಿದರೆ ಅವು ಸೂಕ್ತವಾಗಿವೆ. ನಮ್ಮ ಘಟನಾತ್ಮಕ ದೃಷ್ಟಿಯಿಂದ, ಬರುವ ಒಂದೆರಡು ವರ್ಷಗಳಲ್ಲಿ 15 ವರ್ಷ ತುಂಬುತ್ತದೆ. ಆಗ ನಮ್ಮ ದೇಶದಲ್ಲಿ ಎಲ್ಲ ಕನ್ನಡಿಗರೂ ಪರಿಪಕ್ವವಾಗಿ ಕನ್ನಡವನ್ನು ತಿಳಿದುಕೊಂಡು ಸಾಕಷ್ಟು ಮಟ್ಟಿಗೆ ಬರವಣಿಗೆ ತಿಳಿದುಕೊಂಡು, ಭಾಷಾಜ್ಞಾನವನ್ನು ಪಡೆದುಕೊಂಡ ಮೇಲೆ ಇಂಗ್ಲಿಷ್ ದೂರವಾಗಬಹುದು. ಅವರೆಗೆ ಇಂಗ್ಲಿಷ್ ಬೇಕು.

ನಮ್ಮ ಕನ್ನಡ ಮಾಧ್ಯಮವಾಗಿ ಪಕ್ಕದಲ್ಲಿ ಇಗ್ಲೀಷ್, ಹಿಂದಿ ಬರತಕ್ಕದ್ದು ತತ್ತ್ವಶುದ್ಧವಾದ ಮಾತು. ಈ ದೃಷ್ಟಿಯಿಂದ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕರ್ಣಾಟಕದ ರಾಜ್ಯ ಭಾಷೆ ಕನ್ನಡ ಭಾಷೆ ಎನ್ನುವ ಈ ಮಸೂದೆಯನ್ನು ಮಂಡಿಸಿದ್ದಾರೆ. ಈ ಬೃಹತ್ ಸಭೆಯಲ್ಲಿ ಇದನ್ನು ನಮ್ಮ ಪಕ್ಷದ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಈ ಬಗ್ಗೆ ಕೆಲವು ಮಾತುಗಳನ್ನಾಡಲು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಸ್ಥಾನವನ್ನು ಸ್ವೀಕರಿಸುತ್ತೇನೆ.

†Sri V. S. PATIL (Belgaum).—Sir, it has become rather difficult for me either to recommend this Bill or to oppose it *in toto*. So far as the Members who come from the disputed area *i. e.* whether it is part of Maharastra or part of Karnataka, are concerned, they feel that the present measure ought to have been delayed for some time more. The first reason is that we are in emergency. When the nation and national leaders are calling for unity and oneness throughout the country, such a controversial measure which is likely to create......

Sri GANJEE VEERAPPA (Harihar).—No controversy.

Sri V.S.PATIL.—...there is a controversy and I am going to explain it if Hon'ble Members bear with me for a few minutes. If there is no controversy, then the people who have elected as would have elected the congress people with white caps and not us. Even now I challenge the Member to stand in my constituency or any of those constituencies and get at least 25 per cent of votes on this issue.

My feelings as far as this Bill is concerned are mixed. When we have accepted the principle of One-State, One-Langauge, legislation of this kind is very essential. At the same time we have to see that the feelings of the controversial areas like Kasargod are fully respected. If Kasargod is not included in this State and is kept in Kerala, what is the State language that should be made applicable to that area ? Is it Kannada or Malayalam ? Have my friends on the other side no feelings for these people ? ; So they not care for their language and for their upliftment ? It appears that they have forgotten their brothers because they care for themselves and not for others. Even if others are of their kith and kin, they would not care for them. One of my friends just said that there are some parts of Bijapur and Belgaum where Marthi has been imposed upon the Kannada people. Be also said that Urdu had been imposed upon the Kannada people in Hyderabad Karnataka. I do accept the validity of the proposition. Where there are people whose mother-tongue is Kannada, imposition of other languages would be improper. But the same principle must be applied in the case of people whose mother-tongue is not Kannada. Our mother-tongue is Marathi. The feelings my friends expressed for Kannada are sharel by us in respect of our mother-tongue that is Marathi. I do not think any hon. Member will dispute the proposition that everyone has a right to have soft feeling for his mother-tongue, apart from the language of the nation or the language of the world, that is, English.

My submission is that this not the opportune time to being in a measure of this kind, when there is an Emergency. I do not think that our Congress Governments both at the States and the Centre are serious about the Emergency, in spite of the fact that people are arrested under the D. I. R. Act and Rules, though they are released subsequently. We

(SRI V. S. PATIL)

say that India must stand united to the last man but when we look to the actions of our Government we see that they are creating trouble everywhere and sowing seeds of dissensions at a time when unity is the crying need. In Parliament they introduced a Bill for having Hindi as the national language when the whole of South India rose against it. There was commotion. The Hindi-speaking people were very staunch in favour of having that language as the national language throughout the country and excluding English. The whole of the South, from Vindhaya Mountains to Kanyakumari, more than half-the nation, was practically in arms, so to say. Thus it is that troubles are created by the Congress Government. Our hon. Chief Minister has brought this Bill just to prick us whenever there is calm and quiet. They want to create some trouble or the other and create dissensions among the people.

In the Statement of Objects and Reasons it is stated that Government had appointed a Committee and that according to their recommendations this Bill has been brought forward. We are completely ignorant about the report. That report has not been published nor placed before this House. How then can we give our views or offer criticisms ?

I should remind this House that one of the eminent Members of this House, the ex-Cheif Minister of this State, Sri Hanumanthiah, had spoken on several occasions on this topic. He had said that Reorganisation of this State was not at all on the basis of language but for some other reasons. It was not Karnataka or the State of Kannada people. That was his firm stand. Even when a resolution on this subject was taken up in this Assembly in 1951 he said that this State was not going to be Karnataka or Kannada Nad, but it would be Vishala Mysore. That was his contention throughout and when the originator who was brought all these areas into this State was definite that it is not going to be a Kannada Nadu, or a State formed on the basis of one-language, one-State, I do not know how this Bill has been brought now, particularly, when there are territories in this State where in the mother-tongue of the people is not Kannada. I hope the hon. Chief Minister would consider the point and would explain that Clause 4 gives power to the Government to protect the interests of minorities. But judging from our experience of the words and deeds of this Government, I do not feel that the linguistic minorities would be protected. Nothing has been done all these years. Even in this House, even though we have cried hundred times that there should be a Stenographer in Marathi, and that there should be printing of speeches in Marathi, nothing has been done.

MR. SPEAKER.—The hon. Member must remember that I have been repeatedly making it clear that it is not in the hands of Government. It is with me. I have said that if you can get me a man, I am prepared to appoint him. We advertised but none turned up and there is no point in blaming the Government. It is not the Government that provides for this but the Legislature Secretariat.

Sri V. S. PATIL.—But there is no advertisement published in Maharashtra newspapers. There is no provision in the Budget.

Mr. SPEAKER.—To cut matters short, let me tell the hon. Member: Let him get me any paper, that he likes and I want I will advertise in it. Let him proceed to the next point.

Sri V. S. PATIL.—That is why I say that even though there is the Constitutional provision under Article 210 that English may be continued upto 1965, when there are 2 more years to go, and probably the Emergency may end by that time I do not know the urgent reason for bringing this Bill. When the Chinese menace is ended, we can take up bills of this kind and pass them wholeheartedly. But it appears, as my friend said, the Congress Governments wants some cheap popularity. They want that people everywhere must become Kannadigas, though in Bangalore City itself, which is a cosmopolitan city, Kannadigas are in a minority.

AN HON. MEMBER.—What about Bombay ?

Sri V. S. PATIL.—In Bombay we are 47%. In Bangalore the Kannadigas are below 25 per cent. That is all the difference. I do not say that in Bombay we are in a majority. The article says:

> "Unless the Legislature of the State by law otherwise provides this article shall after the expiration of a period of 15 years from the commencement of this Constitution, have effect as if the words "or English" were omitted therefrom".

So, when our friends, the Ruling Party, want to retain English, why should they not include other languages spoken by the minorities in the State ? They want the foreign language to be retained. We feel that Kannadigas are our brothers. They also say that we are their brothers, but our language is not included anywhere in the Bill. This is really absurd. They want that we should remain in the State, but at the same time they want to see that our language is smashed. That cannot be tolerated. As you have respect, reverence and importance for Kannada, the same thing is felt by us with regard to Marathi and I do not think that any member will take objection to our feelings. For the above two reasons, I feel that during this emergency this Bill ought not to have been brought on the floor of the House. When English is to be perpetuated or given life-long development, why other languages should not be given preference ?

† ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಕನ್ನಡವನ್ನು ರಾಜ್ಯ ಭಾಷೆಯಾಗಿ, ಅಧಿಕೃತ ಭಾಷೆಯಾಗಿ ಅಥವಾ ಸರಕಾರಿ ಭಾಷೆಯಾಗಿ ಮಾಡಲು ತಂದಿರುವ ಈ ವಿಧೇಯಕವನ್ನು ನಾನು ಸಮರ್ಥಿಸುತ್ತೇನೆ ಹಾಗೂ ಇದಕ್ಕಾಗಿ ಸರಕಾರದವರು ಅಭಿನಂದನೀಯರು. ನಾವು ಸ್ವರಾಜ್ಯವನ್ನು ಪಡೆದು, ಕನ್ನಡ ರಾಜ್ಯವನ್ನು ಪಡೆದು ನಿಜವಾಗಿ ನಮ್ಮ ಸ್ವಂತ ಭಾಷೆಯಲ್ಲಿ ವ್ಯವಹರಿಸಲಿಕ್ಕೆ ಆಗದಿದ್ದರೆ ಜನತೆ ಸ್ವರಾಜ್ಯದಲ್ಲಿ ಇದ್ದರೂ ಪರರಾಜ್ಯದಲ್ಲಿ ಇದ್ದಂತೆ ಎನ್ನುವಂಥ ಪರಿಸ್ಥಿತಿ ಇತ್ತು. ಅದಕ್ಕೆ ಸರಕಾರದ ಕಾರ್ಯಕಲಾಪಗಳು ಯಾವುದೇ ಆದರೂ ಕನ್ನಡದಲ್ಲಿ ನಡೆದರೆ, ಜನರ ಆಡುಭಾಷೆ—ಮಾತೃ ಭಾಷೆಯಲ್ಲಿ ನಡೆದರೆ ಜನತೆಗೆ, ಸಾಮಾನ್ಯ ಪ್ರಜೆಗೆ ಚೆನ್ನಾಗಿ ವ್ಯವಹಾರ ಮಾಡಲಿಕ್ಕೆ ಬರುತ್ತದೆ. ಅದರಿಂದ ಸರಕಾರದ ಆಡಳಿತಕ್ಕೂ ಅನುಕೂಲವಾಗುತ್ತದೆ. ಇಲ್ಲದೇ ಇದ್ದರೆ ಸರಕಾರದ ಆಫೀಸರು ಅಥವಾ ಆಡಳಿತಗಾರರು ಒಂದು ರೀತಿಯಲ್ಲಿ ಹೇಳುವುದು ಜನತೆ ಮಾಡುವುದು ಮತ್ತೊಂದು ರೀತಿಯಲ್ಲಿ ಹೀಗೆ ಜನರು ಅದನ್ನು ಅರಿತುಕೊಳ್ಳದೇ ಒಂದಕ್ಕೊಂದು ವಿರೋಧವಾಗಿ ಅದನ್ನು ಸರಿ ಮಾಡಲಿಕ್ಕೆ ಬರದಹಾಗೆ ಆಗುತ್ತದೆ. ಅದಕ್ಕೆ ಕನ್ನಡವನ್ನು ರಾಜ್ಯ

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಭಾಷೆಯಾಗಿ, ಅಧಿಕೃತಭಾಷೆಯಾಗಿ ಮಾಡಿರುವುದು ಬಹಳ ಸ್ತುತ್ಯವಾದ ಕೆಲಸ. ಹೀಗೆ ಮಾಡಿದ್ದರೂ 4ನೇ ಪ್ರಕರಣದಲ್ಲಿ ಇದರ ವ್ಯಾಪ್ತಿಯನ್ನು ಸ್ವಲ್ಪ ಮೊಟಕು ಮಾಡಿದ ಹಾಗೆ ಇದೆ, ಏಕೆಂದರೆ ರಾಜ್ಯ ಸರಕಾರದವರು ಕಾಲ ಕಾಲಕ್ಕೆ ಆಜ್ಞೆ ಹೊರಡಿಸಿ, ನಿರ್ದೇಶಿಸಿದ ವಿನಾ ಇದು ಅಧಿಕೃತ ಭಾಷೆಯಾಗಿ ಬರುವುದಿಲ್ಲ. ಇದರಿಂದ ಸಂಪೂರ್ಣವಾಗಿ ಈ ವಿಧೇಯಕವೇ ಮೊಟಕು ಆಗುವಂಥ ಪರಿಸ್ಥಿತಿ ಇದೆ ಎನ್ನಬೇಕಾಗುತ್ತದೆ.

ಶ್ರೀಮಾನ್ ವಿ. ಎಸ್. ಪಾಟೀಲ್ ಅವರು ಹೇಳಿದರು : ಕೇವಲ ಒಂದೇ ಭಾಷೆ ಇದ್ದರೆ ಇತರ ಭಾಷೆಯವರಿಗೆ ಅನಾನುಕೂಲ ಪರಿಸ್ಥಿತಿಯುಂಟಾಗಿ ತೊಂದರೆಯಾಗುತ್ತದೆ ಎಂದು. ಅದಕ್ಕಾಗಿಯೇ ಈ 4ನೇ ಪ್ರಕರಣದಲ್ಲಿ ಸೌಲತ್ತು ಇಟ್ಟಿರುವುದು ಸೂಕ್ತವಾಗಿದೆ ಎಂದರೆ ಮೈನಾರಿಟೀಸ್‌ಗೆ ಅನುಕೂಲವಾಗುವಂತೆ ಈ ಒಂದು ಅವಕಾಶವನ್ನು 4ನೆಯ ಪ್ರಕರಣದಲ್ಲಿ ಅಳವಡಿಸಲಾಗಿದೆ ಎಂದು ತಿಳಿದು ಸಮಾಧಾನಪಡಬೇಕು. ಕನ್ನಡವು ಒಮ್ಮೆಲೇ ದೇಶದಾದ್ಯಂತ ಜಾರಿಗೆ ಬರಬೇಕೆಂದು ಇದರಲ್ಲಿ ನಮೂದು ಮಾಡಿದ್ದರೆ ಒಳ್ಳೆಯದಿತ್ತು. ಇನ್ನು ಕನ್ನಡ ಭಾಷೆಯನ್ನು ಅಧಿಕೃತ ಭಾಷೆಯಾಗಿ ಮಾಡುವಾಗ ಕೆಲವೊಂದು ಸಮಸ್ಯೆಗಳು ಬರುತ್ತವೆ. ಅವು ಯಾವುವೆಂದರೆ ಸರಕಾರೀ ಪತ್ರವ್ಯವಹಾರ ಮಾಡುವಾಗ ಟೈಪ್ ಮಾಡಬೇಕಾಗುತ್ತದೆ. ಅದಕ್ಕೆ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇರತಕ್ಕ ಎಲ್ಲಾ ಆಫೀಸುಗಳಲ್ಲೂ ಟೈಪ್‌ರೈಟಿಂಗ್ ಮಾಡತಕ್ಕ ಮಿಷಿನುಗಳು ಉಪಯೋಗಕ್ಕೆ ಬಾರದಿದ್ದರೆ ರಾಜ್ಯ ಭಾಷೆ ಕನ್ನಡ ಆಗಿಯೂ ಪ್ರಯೋಜನವಿಲ್ಲ. ಏಕೆಂದರೆ ಜನರು ಅದನ್ನು ಸರಾಗವಾಗಿ ಉಪಯೋಗಿಸಲಿಕ್ಕೆ ಅನಾನುಕೂಲವಾಗುತ್ತದೆ. ಯಾವುದಾದರೂ ಒಂದು ಕಾಗದದ ಪ್ರತಿಯ ನೂರಾರು ಪ್ರತಿಗಳು ಬೇಕಾದಲ್ಲಿ ಇಂಗ್ಲೀಷ್‌ನಲ್ಲೇ ಮಾಡಬೇಕಾಗುತ್ತದೆ, ಕನ್ನಡದಲ್ಲಿ ಟೈಪ್ ರೈಟಿಂಗ್ ಇಲ್ಲದಿದ್ದರೆ. ಅದು ಕನ್ನಡದಲ್ಲಿ ಇದ್ದರೂ ಕೂಡ ಅದರ ಪ್ರಯೋಜನವನ್ನು ಹೊಂದುವುದಕ್ಕೆ ಆಗುವುದಿಲ್ಲ. ಕನ್ನಡ ಟೈಪ್‌ರೈಟರ್ ಇದ್ದರೆ ಹೆಚ್ಚು ಪ್ರತಿಗಳನ್ನು ಪಡೆಯಬಹುದು ; ಇಂಗ್ಲೀಷಿಗೆ ಮೊರೆ ಹೋಗಬೇಕಾಗಿಲ್ಲ. ಈ ಒಂದು ಅನಾನುಕೂಲವನ್ನು ತಪ್ಪಿಸುವುದಕ್ಕೆ ನಾನು ಅತಿ ವಿನಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ ಸರಕಾರದವರು ಆದಷ್ಟು ಬೇಗ ಇನ್ನೂ ಹೆಚ್ಚು ಟೈಪ್‌ರೈಟರುಗಳನ್ನು ಗ್ರಾಮಮಟ್ಟದ ಆಫೀಸುಗಳಿಗೂ, ತಾಲ್ಲೂಕು ಮಟ್ಟದ ಆಫೀಸುಗಳಿಗೂ, ಜಿಲ್ಲಾ ಮಟ್ಟದ ಆಫೀಸುಗಳಿಗೂ ಒದಗಿಸಲು ಹೆಚ್ಚು ಮುತುವರ್ಜಿ ವಹಿಸಬೇಕು.

ಮತ್ತೊಂದು ಅಂಶ ಇದರಲ್ಲಿ ಏನಿದೆ ಎಂದರೆ ಕನ್ನಡ ರಾಜ್ಯ ಭಾಷೆ ಅಥವಾ ಅಧಿಕೃತ ಭಾಷೆಯಾದರೂ ವಿಧಾನಮಂಡಲದಲ್ಲಿ ಬಳಸಲು ಇಂಗ್ಲೀಷ್ ಭಾಷೆ ಮುಂದುವರಿಸಬೇಕೆಂದು 5ನೇ ಪ್ರಕರಣದಲ್ಲಿ ಹೇಳಿದೆ. ಆದ್ದರಿಂದ ಇಲ್ಲಿ ಕನ್ನಡ ಬೇಗ ಬರುತ್ತದೆ ಎಂದು ನಿಶ್ಚಯ ಇಲ್ಲ. ಇಂಗ್ಲೀಷನ್ನು ಉಚ್ಚಮಟ್ಟದಲ್ಲಿ ಇಟ್ಟುಕೊಂಡರೂ ಅದು ಪರಭಾಷೆ — ಅಂತರರಾಷ್ಟ್ರೀಯ ಭಾಷೆಯಾಗಿಟ್ಟುಕೊಳ್ಳಬಹುದ. ಹಿಂದಿ ರಾಷ್ಟ್ರ ಭಾಷೆಯಾಗುತ್ತದೆ, ಹಿಂದಿಯನ್ನು ಎಲ್ಲಾ ಮಟ್ಟದಲ್ಲೂ ಬಳಸಲಿಕ್ಕೆ ಪ್ರಯತ್ನ ಮಾಡುವುದು ಒಳಿತು, ಹೆಚ್ಚು ಅನುಕೂಲವಾದೀತು ಎಂದು ಹೇಳುತ್ತೇನೆ. ಮತ್ತೊಂದು ಸೂಚನೆ ಏನೆಂದರೆ ಈಗಾಗಲೇ ಒಬ್ಬ ಸ್ನೇಹಿತರು ಹೇಳಿದ ಹಾಗೆ ಉಚ್ಚಮಟ್ಟದ ಅಧಿಕಾರಿಗಳು ಇಂಗ್ಲೀಷನ್ನೇ ಬಳಸುವುದಾದರೂ ಅವರಿಗ ತಕ್ಕಮಟ್ಟಿನ ಜ್ಞಾನ ಕನ್ನಡದಲ್ಲಿ ಇರಬೇಕು, ಸರಕಾರ ಅಂತಹ ನಿರ್ದೇಶನ ಕೊಡುವುದು ಒಳ್ಳೆಯದು ಮತ್ತು ಅಗತ್ಯ ಎಂದು ನಾನು ತಿಳಿಯುತ್ತೇನೆ.

ಇನ್ನು ಟೆಕ್ನಿಕಲ್ ಅಥವಾ ತಾಂತ್ರಿಕ ಶಬ್ದ ಉಪಯೋಗಿಸುವಾಗ ಕಷ್ಟ ಬರಬಹುದು ಎಂದು ಕೆಲವರಿಗೆ ಸಂದೇಹ ಇದೆ. ಯಾವ ಭಾಷೆಯಲ್ಲಿದ್ದರೂ ಅದನ್ನು ಕನ್ನಡ ಭಾಷೆಗೆ ತೆಗೆದುಕೊಂಡು ಅದೇ ತಾಂತ್ರಿಕ ಶಬ್ದವನ್ನು ಉಪಯೋಗಿಸಬಹುದು. ಹಾಗೆ ಉಪಯೋಗಿಸಿದರೆ ಕಷ್ಟವಾಗಲಿಕ್ಕಿಲ್ಲ. ಭಾಷಾಂತರ ಮಾಡುವಾಗ ಮಾತ್ರ ಅದರ ಅರ್ಥ ಅನರ್ಥವಾಗದಂತೆ ಮಾಡಬೇಕೆಂದು ವಿನಯದಿಂದ ಕೇಳಿಕೊಳ್ಳುತ್ತೇನೆ. ಇಷ್ಟನ್ನು ಹೇಳಿ ಕನ್ನಡ ಭಾಷೆ ಅಧಿಕೃತ ಭಾಷೆಯನ್ನಾಗಿ ಮಾಡುವಂಥ ಈ ವಿಧೇಯಕ ಅಂಗೀಕೃತವಾದ ಅನಂತರ ಇದು ಬೇಗನೆ ಕೃತಿಗೆ ಇಳಿದು ಕೂಡಲೇ ಜಾರಿಗೆ ಬರುವಂತೆ ಪ್ರತಿಯೊಂದು ಇಲಾಖೆಯಲ್ಲೂ ಮತ್ತು ಎಲ್ಲಾ ಕಡೆಯಲ್ಲೂ ಕ್ರಿಯಾತ್ಮಕವಾಗಿ ಕಾರ್ಯರೂಪದಲ್ಲಿ ಉಪಯೋಗಿಸುವಂತಾಗಲು ಆ ಕಡೆಗೆ ಹೆಚ್ಚಿನ ನಿಗಾ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಂಡು ಈ ಮಸೂದೆಯನ್ನು ಸಮರ್ಥನೆ ಮಾಡುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ರಾಜ್ಯ ಭಾಷೆಗೆ ಸಂಬಂಧಪಟ್ಟ ವಿಧೇಯಕವನ್ನು ಸ್ವಾಗತಿಸುತ್ತಾ ನಾನು ನಾಲ್ಕಾರು ಮಾತುಗಳನ್ನಾಡಲು ಇಷ್ಟಪಡುತ್ತೇನೆ. ಕನ್ನಡದಲ್ಲಿ ಮಾತನಾಡಿದರೆ ಅವರು ದಡ್ಡರು, ಇಂಗ್ಲೀಷ್ ಬಾರದಿದ್ದರೆ ತಿಳಿವಳಿಕಸ್ಥನಲ್ಲ, ಅಪ್-ಟು-ಡೇಟ್ ಅಲ್ಲ, ಅಂಥಹವನು ಹತ್ತಿರಕ್ಕೆ ಸೇರಿಸಲೂ ಅನರ್ಹ ಎಂದು ಅನ್ನತಕ್ಕ ಕಾಲ

ಒಂದು ಇತ್ತು. ಅದು ಸ್ವಲ್ಪ ಬದಲಾವಣೆಯಾಗಿ ಕನ್ನಡ ಮಾತನಾಡಿದರೆ ಪರವಾಗಿಲ್ಲ, ಅವರಿಗೂ ಬುದ್ಧಿ ಇದೆ, ವ್ಯವಹಾರಜ್ಞಾನ ಇದೆ, ಅವರನ್ನು ನಮ್ಮ ಜೊತೆಯಲ್ಲಿ ಸೇರಿಸಿಕೊಳ್ಳಬಹುದು ಎಂದು ಅನ್ನತಕ್ಕ ಒಂದು ಕಾಲ ಬಂತು. ಈಗ ಕನ್ನಡವೇ ಆಡಳಿತ ಭಾಷೆಯಾಗಬೇಕು, ಕನ್ನಡವನ್ನು ಎಲ್ಲರೂ ಕಲಿಯಬೇಕು ಮತ್ತು ಕನ್ನಡದಿಂದಲೇ ನಮ್ಮ ದೇಶ ಒಂದಾಗಬೇಕು ಎಂದು ಹೇಳುವ ಸುದಿನ ಬಂದಿದೆ. ಇಂತಹ ಮಸೂದೆಯನ್ನು ಅನುಮೋದಿಸುತ್ತಾ ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದು ನಿಜವಾಗಿಯೂ ನಮಗೆ ಒಂದು ಪುಣ್ಯಕಾಲ ಎಂದು ಹೇಳುತ್ತಾ ಇದ್ದೇನೆ. ಕನ್ನಡದ ಜೊತೆಗೆ ಇಂಗ್ಲೀಷೂ ಇರಬೇಕು ಅಡ್ಮಿನಿಸ್ಟ್ರೇಷನ್‌ಗಾಗಿ ಅದು ಇರಬೇಕಾಗುತ್ತದೆ ಎಂದು ಹೇಳುವುದು ಒಂದು ಸಂತೋಷದ ಸಂಗತಿಯಾಗಿದೆ. ಏಕೆಂದರೆ ಈಗ ಮೈಸೂರು ರಾಜ್ಯದಲ್ಲಿ ನೋಡಿದರೆ ಹುಬ್ಬಳ್ಳಿಯಲ್ಲಿ ಮಾತನಾಡುವ ಜನರು, ಬೆಳಗಾಂನಲ್ಲಿ ಮಾತನಾಡುವ ಜನರಿಗೂ ನಮ್ಮ ಮೈಸೂರು ಭಾಗದಲ್ಲಿ ಮಾತನಾಡುವ ಜನರಿಗೂ ಭಾಷೆಯಲ್ಲಿ ವ್ಯತ್ಯಾಸವಿದೆ. ನಮ್ಮ ಸಹೋದರ ಶ್ರೀ ಭೀಮಣ್ಣ ಮಾತನಾಡುವುದನ್ನು ಎಷ್ಟೇ ಲಕ್ಷ್ಯ ಕೊಟ್ಟು ಕೇಳಿದರೂ ಅವರು ಏನು ಮಾತನಾಡುತ್ತಾರೆ ಎನ್ನುವುದು ಅರ್ಥವಾಗುವುದಿಲ್ಲ. ಒಂದೊಂದು ಸಾರಿ ಮಂಗಳೂರಿನವರು ಮಾತನಾಡುವುದೂ ಅರ್ಥವಾಗುವುದಿಲ್ಲ. ಹೀಗಿರುವಾಗ ಎಲ್ಲರಿಗೂ ಸರಳವಾಗಿ ಅರ್ಥವಾಗುವ ಭಾಷೆ ಇರಬೇಕು —ನಮ್ಮ ನಮ್ಮ ಭಾಷೆಯೇ ನಮಗೆ ಅರ್ಥವಾಗದೇ ಇರುವಾಗ ಇಂಗ್ಲೀಷ್ ಭಾಷೆಯೂ ಹೊರಟು ಹೋದರೆ ಏನುಮಾಡುವುದು ? ಬೇರೆಯವರ ಅನುಭವ ಕೇಳಿದರೆ—ನನಗೂ ಸ್ವಲ್ಪ ಅನುಭವ ಇದೆ. ಯಾವ ದೇಶಕ್ಕೆ ಹೋದರೂ ಇಂಗ್ಲೀಷು ಗೊತ್ತಿದ್ದರೆ ಅಲ್ಲಿ ಸುಲಭವಾಗಿ ಸುಧಾರಿಸಿಕೊಂಡು, ಎಲ್ಲ ವ್ಯವಹಾರವನ್ನೂ ನಡೆಸಿಕೊಂಡು ಬರಬಹುದು. ಹಾಗಿರುವಾಗ ಇಂಗ್ಲೀಷ್ ಬೇಡ ಎಂದು ಅನೇಕ ಜನಗಳು ಮನವಿ ಮಾಡಿಕೊಂಡರೂ ಇಂಗ್ಲೀಷ್ ಇರಬೇಕೆಂದು ಸರಕಾರ ತೀರ್ಮಾನ ಮಾಡುತ್ತಾ ಇರುವುದು ಒಂದು ಸಂತೋಷದ ಸಂಗತಿಯಾಗಿದೆ.

5-00 P.M.

ಏಕೆಂದರೆ ನಾಳೆ ಟೆಕ್ನಿಕಲ್ ಕೋರ್ಸುಗಳಿಗೂ, ಜುಡಿಷಿಯರಿ Competative I. A. S., I. P. S. ಸ್ಪರ್ಧಾಪರೀಕ್ಷೆಗಳಿಗೆ ಕುಳಿತುಕೊಳ್ಳಬೇಕಾಗಿ ಬರುತ್ತದೆ. ಆಗ ನಮ್ಮ ಜನರಿಗೆ ಅನ್ಯಾಯವಾಗುತ್ತದೆ. ಆ ಉತ್ತರಪ್ರದೇಶದವರನ್ನು ಹಿಂದಿಯಲ್ಲಿ ನಾವು ಕಂಪೀಟ್ ಮಾಡುವುದಕ್ಕೆ ಆಗುವುದಿಲ್ಲ. ಆದರೆ ನಮ್ಮ ಜನರು ಅಷ್ಟು ದಡ್ಡರೆಂದು ನಾನು ಹೇಳುತ್ತಿಲ್ಲ. ನಾವು ಆ ಜನರೊಂದಿಗೆ ಕಂಪೀಟ್ ಮಾಡಲು ಇನ್ನೂ ಕೆಲವು ಕಾಲ ಹೋಗಬೇಕು. ನಾವು ಏನೋ ಒಂದು ಅಭಿಮಾನಕ್ಕಾಗಿ ಕಟ್ಟುಬಿದ್ದಿರಬಹುದು. ಆದರೆ ಖಂಡಿತ ಹೀಗೆ ಮಾಡಬಾರದು. ಆದರೆ ಇನ್ನು ಕೆಲವರು ಈ ಇಂಗ್ಲೀಷು ಹೋಗಬೇಕೆಂದು ಹೇಳುತ್ತಿದ್ದಾರೆ. ಆದರೆ ಇದು ಖಂಡಿತ ಸರಿಯಲ್ಲ. ಅದಕ್ಕೆ ಅವಕಾಶ ಕೊಡಬಾರದೆಂದು ಸರ್ಕಾರದವರಲ್ಲಿ ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಈಗ ನಮಗೆ ಕನ್ನಡ ಮಾಧ್ಯಮವಾಗಬೇಕು, ಜೊತೆಗೆ ಹಿಂದಿ ಮತ್ತು ಇಂಗ್ಲೀಷು ಇವೂ ಬರಬೇಕು. ಅಂತೂ ನಮ್ಮ ಹುಡುಗರು ಈ ಮೂರು ಭಾಷೆಗಳನ್ನೂ ಕಲಿಯಬೇಕಾಗಿದೆ. ಆದರೆ ಇತ್ತೀಚೆಗೆ ನಮ್ಮ ಮೈಸೂರಲ್ಲಿ ನಡೆದಿರತಕ್ಕ ಒಂದು ಅನ್ಯಾಯವನ್ನು ನಾನೀ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳವರ ಗಮನಕ್ಕೆ ತರಬೇಕಾಗಿದೆ. ಇಲ್ಲಿಯವರೆಗೂ ಮಹಾರಾಣಿ ಟೀಚರ್ಸ್ ಕಾಲೇಜಿನಲ್ಲಿ ಮಕ್ಕಳಿಗೆ ಕನ್ನಡದಲ್ಲೂ ಪಾಠಗಳನ್ನು ಹೇಳಲಾಗುತ್ತಿತ್ತು. ಇಲ್ಲಿಯತನಕ ಅಲ್ಲಿ ಕನ್ನಡ ಮತ್ತು ಇಂಗ್ಲೀಷು ಈ ಎರಡು ಮೀಡಿಯಂಗಳೂ ಇದ್ದುವು. ಆದರೆ ಈ ಸಾರಿ ಅಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಕನ್ನಡ ಮೀಡಿಯಂ ಕೊಡುವುದಿಲ್ಲವೆಂದು ಕನ್ನಡವನ್ನು ಕಿತ್ತುಹಾಕಿದ್ದಾರೆ. ಕೇವಲ ಇಂಗ್ಲೀಷು ಮೀಡಿಯಂ ಒಂದನ್ನು ಮಾತ್ರ ಇಟ್ಟುಕೊಂಡಿದ್ದಾರೆ. ಮೈಸೂರಿನಲ್ಲಿ ಈಗ ಬೇಸಿಕ್ ಟ್ರೈನಿಂಗ್ ಕಾಲೇಜು ಎಂದು ಬೇರೆ ಒಂದು ಕಾಲೇಜಿದೆ. ಆ ಬೇಸಿಕ್ ಕಾಲೇಜಿಗೆ ಸಾಕಷ್ಟು ಸ್ಟ್ರೆಂಗ್ತ್ ಇಲ್ಲ ಎಂದು ಹೇಳಿ ಇಲ್ಲಿಯ ಕೆಲವು ವಿದ್ಯಾರ್ಥಿಗಳು ಅಲ್ಲಿಗೆ ಹೋಗಲಿ ಎಂದು ಇಲ್ಲಿ ಕನ್ನಡ ಮೀಡಿಯಂ ಅನ್ನು ತೆಗೆದು ಹಾಕತಕ್ಕದ್ದು ಯಾವ ನ್ಯಾಯ ? ಅಲ್ಲಿರತಕ್ಕ ಕೆಲವು ಹೆಣ್ಣುಮಕ್ಕಳು ನನ್ನಹತ್ತಿರ ಬಂದು ಇದೆಲ್ಲವನ್ನೂ ಹೇಳಿಕೊಂಡು ನಾವು ಬೇರೆಕಡೆ ಹೋಗಿ ಕಾಲೇಜು ಫೀ ಕೊಟ್ಟುಕೊಂಡು ಜೊತೆಗೆ ಹಾಸ್ಟಲುಗಳಲ್ಲಿ ಬೋರ್ಡಿಂಗ್ ಛಾರ್ಜ್‌ಕೊಟ್ಟುಕೊಂಡು ವ್ಯಾಸಂಗಮಾಡಲು ಸಾಧ್ಯವಿಲ್ಲ. ನಮ್ಮ ವ್ಯಾಸಂಗವನ್ನು ನಾವು ಇಷ್ಟಕ್ಕೆ ವಿಧಿಯಿಲ್ಲದೆ ನಿಲ್ಲಿಸಬೇಕಾಗಿದೆ, ನಿಲ್ಲಿಸಿಬಿಡುತ್ತೇವೆಂದು ತಿಳಿಸಿದರು. ಆಗ ನಾನು ಅವರಿಗೆ ಒಂದು ಸಮಾಧಾನ ಹೇಳಿಕಳುಹಿಸಿದೆನು. ಡೆಪ್ಯುಟೆಡ್ ಟೀಚರ್ಸ್‌ಗಳನ್ನು Men's ಟ್ರೈನಿಂಗ್ ಕಾಲೇಜಿಗೆ ಈ ಗಲಾಟೆ ಬರುತ್ತಲೇ ಕಳುಹಿಸಿದ್ದಾರೆ. ಆದರೆ ಬಾಕಿ ಹೆಣ್ಣುಮಕ್ಕಳಿಗೆ ಎಂದರೆ ಇದ್ದುದರಲ್ಲಿ ಕನ್ನಡ ಮೀಡಿಯಂನಲ್ಲಿ S. S. L. C. ಮಾಡಿದ್ದ ವಿದ್ಯಾರ್ಥಿನಿಯರಿಗೆ ಇದರಿಂದ ಅನ್ಯಾಯವಾಗಿದೆ. ಈ ವಿಚಾರವನ್ನು ನಾವೀಗ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಕನ್ನಡಮೀಡಿಯಂ ತೆಗೆದುಕೊಂಡಿರತಕ್ಕ ಮಕ್ಕಳಿಗೆ ಅನ್ಯಾಯವಾಗದಂತೆ ಕಡ್ಡಾಯ ಶಿಕ್ಷಣ ಇದ್ದುದರಲ್ಲಿ ಜಾರಿಗೆ ತಂದು ಶಿಕ್ಷಕರು ಬೇಕಾಗಿರುವಾಗ ಅವರಿಗೆ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ತೊಂದರೆಯಾಗದಂತೆ ಸರ್ಕಾರದವರು ದಯವಿಟ್ಟು ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಕನ್ನಡಭಾಷಾ ಬೆಳವಣಿಗೆಗೆ ಅಗತ್ಯವಾದ ಟೈಪರೈಟರು ವಗೈರೆಗಳೆಲ್ಲ ಬೇಕು, ಆದರೆ ಥಟ್ಟನೆ ಎಲ್ಲವೂ ಆಗುವುದಿಲ್ಲ; ಕಾಲಬೇಕು. ಆದರೆ ಈಗಾಗಲೇ ಶ್ರೀಮತಿ ನಾಗರತ್ನಮ್ಮ ಹಿರೇಮಠ್ ಅವರು ಹೇಳಿದಹಾಗೆ ಈ ಭಾಷೆ ಎನ್ನುವುದು ಅಂಥ ಒಂದು ಬೊಂಬಾಸ್ಟಿಕ್ ಲಾಂಗ್ವೇಜಿನಲ್ಲಿ ಇರಬಾರದು. ಈ ವಿಚಾರಗಳಬಗ್ಗೆ ಈಗಾಗಲೇ ಶ್ರೀ ಮುಕ್ಕಣ್ಣಪ್ಪನವರು ಹೇಳಿದಂತೆ ಒಂದು ರಿಸರ್ಚ್‌ಬ್ಯೂರು ಮಾಡಬೇಕಾದುದು ಅತ್ಯಗತ್ಯ ಎಂದು ಹೇಳುತ್ತೇನೆ. ಕಡೆಯದಾಗಿ ಈ ಬಿಲ್ಲನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ; ನಾನು ಈ ಮಸೂದೆಯನ್ನು ಸ್ವಾಗತಿಸುತ್ತ ಕೆಲವು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇನೆ. ಈ ಮಸೂದೆ ಇಲ್ಲಿ ಚರ್ಚೆಗೆ ಬಂದಕಾಲಕ್ಕೆ ಸರಿಯಾಗಿ ಒಂದು ಶುಭವನ್ನು ತರಬೇಕಾಗಿತ್ತು. ಅದೇನೆಂದರೆ—ಈಗ ನಮಗೆ ಒದಗಿಸಿರತಕ್ಕ ಈ ಮಸೂದೆಯು ಇಂಗ್ಲೀಷಿನಲ್ಲಿದೆ. ಈ ಮಸೂದೆಯನ್ನು ಇಂಗ್ಲೀಷಿನಲ್ಲಿ ಅಚ್ಚುಹಾಕಿಸಿ ಹಂಚುವುದಕ್ಕೆ ಬದಲಾಗಿ ಕನ್ನಡದಲ್ಲೇ ಅಚ್ಚುಹಾಕಿಸಿ ಹಂಚಿಸಿದ್ದರೆ ಅದೊಂದು ಶುಭ ಸೂಚನೆ ಆಗುತ್ತಿತ್ತು. ಆದರೆ ಹಾಗೆ ಏಕೆ ಮಾಡಲಿಲ್ಲವೋ ಗೊತ್ತಾಗಲಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಕನ್ನಡದಲ್ಲಿ ಪ್ರಿಂಟ್ ಮಾಡಿಸಿ ಹಂಚಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಹಾಗಿದ್ದರೆ ನನ್ನಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಈ ಮಸೂದೆಯಲ್ಲಿ ಹೊಸದೇನೂ ಇಲ್ಲ! ಈವರೆಗೆ ಸರಕಾರದವರು ಅನುಸರಿಸಿಕೊಂಡುಬಂದ ಧೋರಣೆಗೆ ಶಾಸನಾತ್ಮಕ ಮನ್ನಣೆ ನೀಡುವುದಕ್ಕಿಂತ ಹೆಚ್ಚಿಗೆ ಏನೂ ಈ ಮಸೂದೆಯಲ್ಲಿ ಹೇಳಿಲ್ಲ. ಅಕಾರಣವಾಗಿ ಕೆಲವರು ಸಂಶಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಆದರೆ ಅಂಥ ಭಯಕ್ಕೆ ಯಾವ ಅವಕಾಶವೂ ಇಲ್ಲ. ಆದರೆ ನನ್ನ ಮಹಾರಾಷ್ಟ್ರದ ಹಳೆಯ ಮಿತ್ರರು ಇಲ್ಲಿ ಕೆಲವು ಮಾತುಗಳನ್ನು ಹೇಳಿದರು ಉದಾಹರಣೆಗಾಗಿ; ಅವರ ಮಹಾರಾಷ್ಟ್ರದಲ್ಲಿ ಈ ಬಗ್ಗೆ ಏನು ನಡೆದಿದೆ ಎಂಬುದನ್ನು ಬಹುಶಃ ಅವರು ವಿಚಾರಮಾಡಿರಲಿಕ್ಕಿಲ್ಲ ಎಂದು ತೋರುತ್ತಿದೆ. ಮಹಾರಾಷ್ಟ್ರದಲ್ಲಿ ಅಲ್ಲಿಯ ಸರ್ಕಾರದವರು ಇಂಥ ಒಂದು ಮಸೂದೆಯನ್ನು ಮಂಡಿಸಿದ್ದ ಕಾಲಕ್ಕೆ ಅಲ್ಲಿಯ ಕನ್ನಡಿಗರು ಇವರಹಾಗೆಯೇ ಅಸಮಾಧಾನವ್ಯಕ್ತ ಮಾಡಿದರೇ ಅಥವಾ ಇಲ್ಲವೇ ಎಂಬುದನ್ನಾದರೂ ಅವರು ಆಲೋಚಿಸಬೇಡವೆ? ಯಾವ ರಾಜ್ಯದಲ್ಲೇ ಆಗಲಿ ಒಂದೇ ಒಂದು ಭಾಷೆ ಇರುವಂತೆ ಮಾಡಲು ಖಂಡಿತ ಸಾಧ್ಯವಿಲ್ಲ.

Sri L. B. BIRJE (Khanapur).—(Spoke in Marathi).

ಶ್ರೀ ಎ. ಜೆ. ದೊಡ್ಡಮೇಟಿ.—ಆದರೆ ಅಲ್ಲಿ ಯಾವ ಒಂದು ಕಾನೂನು ಇಲ್ಲದೆ ತಮ್ಮ ಭಾಷೆಯಲ್ಲಿ ಕೆಲಸ ಮಾಡುತ್ತಿರಬಹುದು. ಅದು ಬೇರೆವಿಷಯ. ಈ ಹಿಂದೆ ಆ ಮಹಾರಾಷ್ಟ್ರ ರಾಜ್ಯವಾಗುವುದಕ್ಕೆ ಮುನ್ನ ಅಲ್ಲಿ ಈ ಭಾಷಾವಿಚಾರದಲ್ಲಿ ಏನು ಒಂದು ಪರಿಸ್ಥಿತಿಯಿತ್ತು ಎನ್ನುವುದಕ್ಕೆ ಮಾನ್ಯ ಸದಸ್ಯರ ಗಮನಕ್ಕೆ ತಂದರೆ ಆಗ ಅವರಿಗೆ ಇದರ ಅರಿವಾಗುತ್ತದೆ. ಆದರೆ ಇದೇ ಬೆಂಗಳೂರು ನಗರದಲ್ಲಿ ಎಷ್ಟಂಶ ಕನ್ನಡಿಗರಿದ್ದಾರೆ ಎಂಬುದನ್ನು ನೋಡಿದರೆ ಬೇರೆ ಭಾಷೆಯವರನ್ನು ಸ್ವಾಗತಿಸುವ ಕನ್ನಡಿಗರ ವಿಶಾಲ ಬುದ್ಧಿ ಎಷ್ಟಿದೆ ಎಂಬುದು ತಾನೇ ಗೊತ್ತಾಗುತ್ತದೆ. ಇಲ್ಲಿ ಭಾಷಾ ದೃಷ್ಟಿಯಿಂದ ನೋಡಿದರೆ ಪರಭಾಷೆಯ ಜನರೇ ನೌಕರಿಯಲ್ಲಿ ಬಹಳ ಮಂದಿ ಇದ್ದಾರೆ. ಈ ನಗರದಲ್ಲಿ ಕನ್ನಡಿಗರ ಸಂಖ್ಯೆಯೇ ಬಹಳ ಕಡಿಮೆ. ಇದು ಕನ್ನಡಿಗರ ಒಂದು ಔದಾರ್ಯ ಬುದ್ಧಿ ಫಲವನ್ನು ತೋರಿಸುತ್ತಿದೆ. ಈ ಹಿಂದೆ ನಾನು ಮುಂಬೈ ರಾಜ್ಯದಲ್ಲಿ ಶಾಸನ ಸಭಾಸದಸ್ಯನಾಗಿದ್ದೆ. ಅಲ್ಲಿ ನನಗೆ ಮೊದಲೆರಡು ದಿವಸ ಕನ್ನಡದಲ್ಲಿ ಮಾತನಾಡಲು ಅನುಕೂಲತೆಯೇ ಸಿಕ್ಕಲಿಲ್ಲ. ಅಲ್ಲಿ ಕನ್ನಡ ಭಾಷಾಂತರಕಾರರಿರಲಿಲ್ಲ.

Sri L. B. BIRJE.—(Spoke in Marathi)

ಶ್ರೀ ಎ. ಜೆ. ದೊಡ್ಡಮೇಟಿ .—ಸ್ವಾಮಿ ಆಗ್ಗೆ ಇವರು ಅಲ್ಲಿ ಶಾಸನಸಭಾಸದಸ್ಯರಾಗಿರಲಿಲ್ಲ.

Sri L. B. BIRJE (Spoke in Marathi).—

ಶ್ರೀ ಎ. ಜೆ. ದೊಡ್ಡಮೇಟಿ.—ಆ ಸಭೆಯಲ್ಲಿ ಕನ್ನಡ ತರ್ಜುಮೆಗಾರರನ್ನು ತರಲು ದಿನಗಟ್ಟಲೆ ಹಿಡಿಯಿತು. ನನಗೆ ಎರಡು ದಿನಗಟ್ಟಲೆ ಮಾತನಾಡಲು ಅವಕಾಶಸಿಕ್ಕಲಿಲ್ಲ. ಈ ವಿಚಾರವನ್ನು ಶ್ರೀ ವಿ. ಎಸ್. ಪಾಟೀಲರನ್ನು ಕೇಳಿದರೆ ಗೊತ್ತಾಗುತ್ತದೆ. ಈ ಭಾಷಾ ವಿಚಾರದಲ್ಲಿ ಒಂದು ಮಾತನ್ನು ಹೇಳುವುದಾದರೆ ನಿಜವಾಗಿಯೂ ಕನ್ನಡಿಗರು ಬಹಳ ವಿಶಾಲ ಬುದ್ಧಿಯುಳ್ಳವರು. ನಾವು ನಿಮ್ಮ ಜೊತೆಯಲ್ಲಿ ಸಹೋದರ ಭಾವನೆಯಿಂದ ಇರಬೇಕೆಂಬ ಇಚ್ಛೆ ನಮಗಿದೆ ಎಂದು ನಾನು ಆ ಸಹೋದರರಿಗೆ ಅನೇಕ ಬಾರಿ ಹೇಳಿದ್ದೇನೆ. ಈ ರೀತಿ ನೀವು ಒಂದು ಪ್ರತ್ಯೇಕ ಚಳುವಳಿ ಮಾಡುವುದು ಬೇಡ ಎಂದೂ ಈ ನನ್ನ ಸ್ನೇಹಿತರಿಗೆ ಅನೇಕ ಬಾರಿ ಹೇಳಿದ್ದೇನೆ.

Sri B. L. BIRJE.—(Spoke in Marathi).

ಶ್ರೀ ಎ. ಜೆ. ದೊಡ್ಡಮೇಟಿ.—ಆಮೇಲೆ ವಿಚಾರ ಮಾಡಬೇಕಾದ ಮಾತು ಅದು. ನಾವು ಈಗ ಅತಿ ತ್ವರಿತವಾಗಿ ಕನ್ನಡ ಭಾಷಾ ಬೆಳವಣಿಗೆಗೆ ಅಗತ್ಯವಾದ ಎಲ್ಲ ಅನುಕೂಲಗಳನ್ನೂ ಕಲ್ಪಿಸಿಕೊಳ್ಳಬೇಕಾಗಿದೆ. ಯಾವುದೋ ಒಂದು ಕಾರಣಕ್ಕಾಗಿ ಇಂಗ್ಲೀಷು ಅನಿಯಮಿತ ಅವಧಿಯವರೆಗೆ ಇರಬೇಕೆಂಬದನ್ನು ನಾನು ಒಪ್ಪುವುದಿಲ್ಲ.! ಇನ್ನು ಈ ರಾಜ್ಯ "ಕಾಂಪೋಜೆಟ್ ಸ್ಟೇಟ್" ಎಂಬುವರನ್ನೂ ನಾನು ಒಪ್ಪುವುದಿಲ್ಲ. ಯಾವ ರಾಜ್ಯದಲ್ಲಿಯೂ ಪೂರ್ಣವಾಗಿ ಒಂದೇ ಭಾಷೆಯವರು ಇರುವುದು ಸಾಧ್ಯವಿಲ್ಲ. ಆದರೆ—

ಏನೋ ಒಂದು ಕಾರಣದಿಂದ ಈ ರಾಜ್ಯದಲ್ಲಿ ಎಲ್ಲೋ ಒಂದು ರೀತಿಯ ಅನಿಶ್ಚಿತ ಸ್ಥಿತಿಯಲ್ಲಿ ಯಾರಾದರೂ ಈ ರೀತಿ ಹೇಳಿರಬಹುದು, ಆ ಮಾತು ಸರಿಯಲ್ಲ. ಎಂದು ನಾನು ಹೇಳಲು ಅಪೇಕ್ಷೆಪಡುತ್ತೇನೆ. ನಮ್ಮ ಸ್ನೇಹಿತರನೇಕರು ಈ ಮಸೂದೆಯ ನಾಲ್ಕನೆಯ ಕಲಮಿನ ಬಗೆಗೆ ಹಂತಹಂತವಾಗಿ ಏಕೆ ತರುತ್ತಿದ್ದಾರೆ ಎನ್ನುವುದರ ಬಗೆಗೆ ಸ್ವಲ್ಪ ಸಂದೇಹ ವ್ಯಕ್ತಮಾಡಿದ್ದಾರೆ. ಈ ಸಂದೇಹದಂತೆ ಸರಕಾರದ ಒಳಮನಸ್ಸಿನಲ್ಲಿ ಏನಿದೆಯೋ ಎಂದು ಹೇಳುವುದು ಕಷ್ಟ. ಅರೆ ಮನಸ್ಸಿನಿಂದ ಈ ಬಿಲ್ಲನ್ನು ತಂದು ಈ ರೀತಿ ಹಂತಹಂತವಾಗಿ ತರುತ್ತಿದ್ದಾರೆಂದು ಹೇಳಲು ಏನೋ ಕೆಲವು ಕಾರಣಗಳಿರಬಹುದು. ಈ ಸಂದೇಹವನ್ನು ಜನರಲ್ಲಿ ನಿವಾರಣೆ ಮಾಡಲು ಯಾವ ಬಗೆಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂಬುದನ್ನು ಸರಕಾರದವರು ಸ್ಪಷ್ಟಪಡಿಸಬೇಕು. ಪ್ರಾದೇಶಿಕವಾಗಿ, ಬೇರೆ ಬೇರೆ ಹಂತವೆಂದರೆ ತೊಂದರೆಯಾಗಬಹುದ . ಆಡಳಿತ ಮಟ್ಟದಲ್ಲಿ ಬೇರೆ ಬೇರೆ ಇಲಾಖೆಯಲ್ಲಿ, ಅಥವಾ ಇನ್ನು ಬೇರೆ ಬೇರೆ ದೃಷ್ಟಿಯಿಂದ ಹಂತಹಂತವಾಗಿ ಎಂದು ವಿಚಾರ ಮಾಡುತ್ತಿರಬಹುದು.

ಇನ್ನೊಂದು ವಿಚಾರವನ್ನು ಇಲ್ಲಿ ನಾನು ಹೇಳಬೇಕಾಗಿದೆ, ಈಗ ನಮ್ಮ ದೇಶದ ರಾಜ್ಯಪಾಲರು ಇಲ್ಲಿಯವರೆಗೂ ನಮ್ಮ ಬಡ್ಜೆಟ್ಟಿನ ಭಾಷಣವನ್ನು ಇಂಗ್ಲೀಷು ಭಾಷೆಯಲ್ಲಿಯೇ ಮಾಡುತ್ತ ಬಂದಿದ್ದಾರೆ. ಸರಕಾರದವರು ಇದೇ ಒಂದು ಶುಭ ಸೂಚನೆ ಎಂದು ಮನಸ್ಸಿಗೆ ತೆಗೆದುಕೊಂಡು ಮುಂಬರುವ ಆಯವ್ಯಯದ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣವನ್ನು ಕನ್ನಡದಲ್ಲಿಯೇ ಮಾಡುವ ವ್ಯವಸ್ಥೆ ಮಾಡಬೇಕು-ಇನ್ನು ಮುಂದೆ, ಯಾವ ಕಾರಣದಿಂದಲೂ ಇಂಗ್ಲೀಷು ಭಾಷೆಯಲ್ಲಿ ಅವರು ಭಾಷಣ ಮಾಡಕೂಡದು ಎನ್ನುವ ಈ ಶುಭ ವಿಚಾರದಲ್ಲಿ ಈಗಿನಿಂದಲೇ ನಮ್ಮ ಸರಕಾರ ನಿರ್ಣಯ ತೆಗೆದುಕೊಂಡು ಮೊದಲಿಗೆ ಪ್ರಾರಂಭ ಮಾಡಬೇಕೆಂದು ನಾನು ಸೂಚಿಸಬಯಸುತ್ತೇನೆ. ಈ ಮಸೂದೆಯ ಕಾರ್ಯಾಚರಣೆಯಲ್ಲಿ ಇದೊಂದು ಪ್ರಾಮಾಣಿಕವಾದ ಪ್ರಯತ್ನ ಎಂದು ಜನ ತಿಳಿದುಕೊಳ್ಳುವಂತಾಗಲಿ. ಹಾಗೂ ಇನ್ನೊಂದು ರೀತಿಯಾದ ಪ್ರಯತ್ನವನ್ನು ನಮ್ಮ ಮಂತ್ರಿಮಂಡಲದ ಸಚಿವರ ಕಡೆಯಿಂದ ಜನ, ನಿರೀಕ್ಷಿಸಬಹುದು. ಮಂತ್ರಿಗಳೇ ಆಗಲೀ, ಉಪಮಂತ್ರಿಗಳೇ ಆಗಲೀ ಈ ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಕನ್ನಡದಲ್ಲಿಯೇ ಉತ್ತರವನ್ನು ಕೊಡಬೇಕು ಮತ್ತು ಕನ್ನಡದಲ್ಲಿಯೇ ಮಾತನಾಡಬೇಕು ಎನ್ನುವ ನಿಯಮವನ್ನು ಹಾಕಿಕೊಳ್ಳಬೇಕು. ಕನ್ನಡ ತಿಳಿಯದೇ ಇರುವ ಒಬ್ಬಿಬ್ಬರು ಮಂತ್ರಿಗಳಿದ್ದಾರೆಂದೂ ನಾನೂ ಕೇಳಿದ್ದೇನೆ. ಅಂತಹವರುಗಳು ಇದ್ದರೆ ಅವರು ಈಗಿನಿಂದಲಾದರೂ ಕನ್ನಡವನ್ನು ಕಲಿಯಲಿಕ್ಕೆ ಪ್ರಾರಂಭ ಮಾಡಬೇಕು. ಈಗ ಮೇಲ್ದರ್ಜೆಯಲ್ಲಿರುವ ಅಧಿಕಾರಿಗಳಿಗೆ ಹೇಗೆ ನಿಯಮವನ್ನು ಹಾಕಿದ್ದಾರೋ ಅದರಂತೆ ಕನ್ನಡವನ್ನು ಕಲಿಯಬೇಕೆನ್ನುವ ನಿಯಮವನ್ನು ಹಾಕಿಕೊಳ್ಳಬೇಕು. ಇಂತಹ ಒಳ್ಳೆಯ ಸಲಹೆಯನ್ನು ಆಚರಣೆಗೆ ತರುವಂತೆ ಮಾಡಿದ್ದಾದರೆ ಇದು ಒಂದು ಒಳ್ಳೆಯ ಮಾರ್ಗವೆಂದು ನಂಬುತ್ತೇನೆ. ಇದೊಂದು ಮಹೋನ್ನತವಾದ ಕೆಲಸ ಮಾಡಿದಂತಾಗುತ್ತದೆ. ಆ ರೀತಿ ಮಾಡಲು ಅನೇಕ ಪ್ರಯತ್ನಗಳನ್ನು ಈಗಿನಿಂದಲೇ ಕೃಷಿ ಮಾಡಬೇಕಾಗುತ್ತದೆ. ಈಗ ಅಧಿಕಾರಿಗಳಿಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆಂದು ಒಂದು ಸೂಚನೆಯನ್ನು ಮಾಡಿದ್ದಾರೆ. ಇದನ್ನು ಗಾಂಭೀರ್ಯದ ದೃಷ್ಟಿಯಿಂದ ಇನ್ನು ವಿಚಾರ ಮಾಡಿಲ್ಲ. ಇದಕ್ಕಾಗಿ ಕನ್ನಡ ಟೈಪ್‌ರೈಟರುಗಳ ಬಳಕೆಯನ್ನು ಹೆಚ್ಚು ಮಾಡಿ ಇಂಗ್ಲಿಷು ಟೈಪ್‌ರೈಟರಿನ ಬಳಕೆಯನ್ನು ಆದಷ್ಟೂ ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಇದನ್ನು ಮಾಡಲು ಈಗ ಶಬ್ದಗಳ ಕಷ್ಟ ಬರುತ್ತದೆ ಎಂದು ಹೇಳಬಹುದು. ಇದರ ಬಗ್ಗೆ ಹೇಗೆ ಮಾಡಬಹುದು ಎನ್ನುವುದನ್ನು ವಿಚಾರ ಮಾಡಬೇಕು. ನಾನು ವಿಧೇಯಕಕ್ಕೆ ನನ್ನ ಪೂರ್ಣ ಬೆಂಬಲವನ್ನು ಕೊಡಬೇಕೆಂದರೆ ನನ್ನ ಮನಸ್ಸು ಹಿಂಜರಿಯುತ್ತಿದೆ. ಆದರೂ ಕನ್ನಡವನ್ನು ರಾಜ್ಯಭಾಷೆಯಾಗಿ ಮಾಡಬೇಕೆಂದು ತಂದಿರುವ ಮಸೂದೆ ನಮ್ಮ ಮನಸ್ಸಿಗೆ ಎಷ್ಟೋ ಸಮಾಧಾನಕರವಾಗಿರುವದಾದರೂ ಇದರಿಂದ ಪೂರ್ಣ ತೃಪ್ತಿಪಡುವಂತಿಲ್ಲ ಏಕೆಂದರೆ, ನಮ್ಮ "ಸಂಸ್ಕೃತಿ, ದ್ಯೋತಕವಾದ ಕರ್ಣಾಟಕ" ಹೆಸರು ಈ ರಾಜ್ಯಕ್ಕೆ ಬರುವವರೆಗೆ ಸರಕಾರಕ್ಕೆ ನನ್ನ ಪೂರ್ಣ ಅಭಿನಂದನೆ ಇಲ್ಲ. ಆದರೂ ಈ ಬಿಲ್ಲಿನ ಬಗ್ಗೆ ನನ್ನ ಅರ್ಧ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

Sri P. F. D'MELLOW (Nominated).—Mr. Speaker, Sir, I rise to support the Mysore Official Languages Bill, 1963. I am sorry that I do not agree with the Hon'ble colleague who suggested that this measure was premature, and on the contrary congratulate Government on bringing forward this Bill, soon after the enactment of the Central Official Languages Bill by Parliament.

To my mind it is necessary for our State to have a clearly difined policy as to the language pattern which we desire to see evolved for the State, for quite apart from the necessity to provide our main regional language, Kannada, with the status and dignity of the Official language of the State, to which it is entitled, there is the equal necessity to shed ourselves of all ambiguity in the policy which we wish to see pursued in the field of education, where there is at the moment much anxiety on this account.

Mr. Speaker, To my mind, the Bill itself appears clear and concise and I am satisfied that it is intended to be unambiguous. I believe that or own respected Leader of the House shares the view expressed by Prime Minister Nehru, in regard to the meaning intended to be conveyed by the word "may", as used in the context of clause 5 of this Bill. I recall the assurance given by the Prime Minister concerning the use of the word "may" in the Central Bill, where he said, and I quote, "I think that the use of the word "may" is adequate for the purpose. It is well known that in this context it means "shall".

Sir, I submit that it is necessary and relevant for this House to consider some of the consequences that must flow from this Bill. Consequences that must affect the interests of our country, not only today, but in the years to come when, our children, the future citizens must live. They deserve more consideration than to be condemned to become so many hostages to that future, in the shaping of which, they had no voice.

Mr. Speaker, I submit that languages are meant to serve as bridges of understanding, and not as a cause to divide us as individuals. Love for one's individual "mother-tongue" makes no demand that we should approach other languages with bigotry and hatred. So I believe that the interests of our country and those of its future citizens demand that we today strengthen those bridges of understanding, not merely between citizens residing in one or other of the several States in India, but as between us Indians and the world outside. Such bridges, already exist. They were built by men and women of vision, who sought to create a world of peace and fellowship among people and nations.

Mr. Speaker, If in our darkest hour last October 1962, when our beloved motherland lay wide open to invasion and worse, to my way of thinking, it was not so much because of our non-alignment policy with the dynamics of which the common man is as yet completely unfamiliar, but because of those bridges of understanding, which men of courage and vision like Swami Vivekananda, and Poet Rabindranath Tagore had built in earlier years, which brought friends from the U.S.A. and the U.K. to stand beside us and stem the tide of war. Can anyone

deny that those bridges of understanding were created because of the communion made possible by our sharing the common language, English? Sir, even at this moment, His Highness the Governor of Mysore was embarked on yet another mission to bring the message of this country's philosophy within the understanding of peoples in the great Western Hemisphere, again, through the medium of the international language, English, which we so happily share today. If all this is possible surely it is only because of the attitude of tolerance and goodwill that our country showed in opening its windows to the knowledge and understanding that countries sharing a common language possess.

Sir, I submit that it ill befits a people possessed of an attitude born of spiritual perception and intellectual generosity to suggest, as some unhappily do, that our main regional languages can only grow and develop through the elimination of this one existing bridge of understanding, English, which is an international language today.

Mr. Speaker, Representing as I do, an Indian community, which is possessed of English as its mother tongue, I cannot allow this occasion to pass without emphatically repudiating the suggestion, that the English language today is in any way "foreign" while it is the mother tongue of an Indian community, and while we seek to avail of the one hundred and more other imported arts and sciences, which we seek to harness as vehicles for our progress, plans and advancement.

But, Mr. Speaker, it is not from this angle alone that I offer my remarks. My approach is from that of the weighty consequences that must flow from this Bill in the matter of the education of our future citizens, who will be required not merely to maintain but to further develop the economy that we now plan to create for the future of our country.

Mr. Speaker, On the 21st September 1962, the Constitution Bench of the Supreme Court handed down a judgment of great importance and bearing on the medium of instruction in higher educational institutions, especially in Non-Hindi States like ours. The Supreme Court held that "While the power to legislate in respect of primary and secondary education was exclusively vested in the States by item 11 of List II as did the power to legislate on the medium of instruction in primary and secondary institutions, nevertheless, the power in respect of the medium of instruction in so far as it has a direct bearing and impact upon legislative head, of co-ordination and determination of standards in Institutions of Higher education, Research and Technical Institutions "must also be deemed by item 66 of List I to be vested in the Union."

Sir, Much must therefore depend on what language comes to be accepted as the Link Language, and unless our children in Non-Hindi States are to be condemned to disadvantage in the India that we plan, we must, now, today, ensure that nothing is done to deprive them of that wealth of scientific and technical "know-how" which the present Link language provides. It is incumbent on us here today to ensure that ALL and not the FEW students, acquire opportunities to master

(SRI P. F. D'MELLOW)

an international language like English, which throws open for all the treasures of modern and ever increasing knowledge, the *sine qua non* in the world of tomorrow.

Mr. Speaker, For so long as creative thought in every department of knowledge is not as active in our country as in others, where a study of English is repidly acquiring the compulsion of a national policy, such as in the USSR and in China to mention just to giant countries, it will be extremely shortsighted to cut ourselves off from a language which keeps us in contact with the latest advances in every field of life and culture. Sir, I sincerely believe that the pressing need of this hour, as it confronts this Hon'ble House is that, while adhering strictly to the policy of gradual regionalisation, we must suffer no sudden rupture in the unity of the academic life of our country. We must, Sir, accept and support the findings of the National Integration Council, that instruction in the secondary stage of education will be given generally in the regional language, in our case, Kannada, or in English. I am aware that there are those who prefer that students whose mother-tongue is not English should not be allowed to join English medium schools. They argue that it is only the better placed parents who support the English medium school, and that this should not be encouraged. Mr. Speaker, Sir, those friends who argue in this strain perhaps forget that the child is not the creature of the State, but God given responsibility of the parent who has the legal right to choose the kind of education he wants for his child. Our Constitution does not allow for any discrimination in the matter of providing all citizens with liberty of thought and expression, as well as in the matter of equality in status and opportunity. I ask, must a genius born of humble parentage in our village be denied the opportunity to contribute to the advancement of mankind, because we have denied him access to those bridges of understanding, which only a mastery of languages could provide ?

Mr. Speaker, Shed of bigotry and prejudice, no one will deny that a sound knowledge of English is imperative for access to modern scientific and technical knowledge. Such mastery of this language will also be necessary if we are to allow for the enrichment of our own regional language Kannada, for in English the Kannada scholar will find wealth translated from most of the great world languages, with which we are as yet unfamiliar. Translations can enrich our regional language Kannada, but it is important that our scholars must first master the English language if they are to do justice to their work on behalf of Kannada.

Sir, I am not pleading for English which is already firmly established as one of the leading languages of the world today, language which most great nations are today busy trying to master. Recently I read of the trouble found by China in obtaining competent teachers of English, now that that country has decided to bring English within the reach of all its citizens, having acknowledged that this alone will open doors to

scientific and technical advancement. Sir, I am pleading for our own national needs. Are we to deny or restrict for all our citizens who may so desire, and who may be found suitable otherwise, to keep abreast of world developments; shut our windows to the world outside, until we are once again awakened to the facts and realities that surround us, until we have lost the facility to speak to our friends outside, and hope that they will nevertheless understand our need ?

Mr. Speaker, In the factual context in India today, with it bewildering range of languages, some primitive, others mediaval, and even the most advanced far behind the leading languages of the world in scientific and technical content, no co-ordination or research, or higher education is possible, except through the means of a fully developed Link language. and English is just such a language, one with which our scientists, artists, writers and Scholars are today already familiar. So unless we are willing to risk Kannada remaining stunted and undeveloped while other regional languages progress because of their more intimate association with the English language, we must provide ourselves with more regional institutes where English can be taught, our training colleges must concentrate on correct methods of teaching the English language, and our Kannada scholars must be given every encouragement to avail of these opportunities to master English and set themselves seriously to enriching Kannada art and literature. Then must come the day when Kannada is developed to the stage where it can take its rightful place, and provide not merely the medium of instruction at all levels, but what is more, to help interpret this State to the world outside. Sir, in conclusion and with your permission, I should like to recall for the information of Hon'ble members today, a few significant thoughts expressed by our Philosopher-Statesman, President Radhakrishnan, when addressing the National Integration Conference in 1961, and I quote " It was this attitude of acknowledging every path, rejecting none, trying to find something of value in each tribe, and in each community that has been the tradition which governed the history of our country. It is an attitude born of spiritual perception and intellectual generosity. In the greatest period of our history, when we were able to make a mark, we adopted this attitude of tolerance and good will"; and Sir, President Radhakrishnan went on to warn, " But when we surrendered these principles and resorted to fanatical attitudes our country suffered and declined ", and again he warned, " We never had any linguistic jealousies in the past, nor did we have any prejudice against foreign languages ". Thank you.

5-30 P. M.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಮಾನ್ಯ ಅಧ್ಯಕ್ಷರೇ ರಾಜ್ಯ ಭಾಷೆಗೆ ಸಂಬಂಧಪಟ್ಟ ಈ ವಿಧೇಯಕವನ್ನು ನಾವು ಈವೊತ್ತು ಈ ಸಭೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ. ನಾವು ಇದನ್ನು ಚರ್ಚೆ ಮಾಡುವ ಹೊತ್ತಿಗೆ ನಾನು ನಮ್ಮ ಪುಸ್ತಕ ಭಂಡಾರಕ್ಕೆ ಹೋಗಿ ಇಂಗ್ಲಿಷ್-ಕನ್ನಡ ನಿಘಂಟನ್ನು ಕಾರಣಾಂತರದಿಂದ ಕೇಳಿದಾಗ ಅದು ನಮ್ಮ ಪುಸ್ತಕ ಭಂಡಾರದಲ್ಲಿಲ್ಲ ಎಂಬ ಉತ್ತರ ನನಗೆ ದೊರಕಿತು. ಬಹು ಜನದ ಆಶೆ ಆಕಾಂಕ್ಷೆಗಳನ್ನು ಈಡೇರಿಸುವುದಕ್ಕೆ ಹೊರಟಿರತಕ್ಕ ಈ ವಿಧೇಯಕವನ್ನು ಮಂಡಿಸಿದ ಮಾನ್ಯ ಮುಖ್ಯ ಮಂತ್ರಿಗಳು.........

Mr. SPEAKER.—Which Library did the Hon. Member consult? That is not Government Library. Has he ascertained whether it is there in the Legislature Library?

Sri S. M. KRISHNA.—I did ascertain.

Mr. SPEAKER.—Has the Hon. Member ascertained whether it is available at the moment in the library or whether it is not at all available in the library.

ಶ್ರೀ ಎಸ್. ಎಂ. ಕೃಷ್ಣ.—ನಾನು ನಮ್ಮ ಪುಸ್ತಕ ಭಂಡಾರದಲ್ಲಿ ಅದನ್ನು ಕೇಳಿದಾಗ ಅದು ಇಲ್ಲ ಎಂದು ಹೇಳಿದರು.

Mr. SPEAKER.—So far as our Library is concerned, do not attach any blame to Government. There is a separate Legislature Library in which you should have enquired whether it is available or not.

Sri V. S. PATIL.—Unless the Government publish such a book, even for this Library how is it possible for the Hon'ble Speaker to buy such a book?

Mr. SPEAKER.—I will purchase the book if it is available.

Sri V. S. PATIL.—It is not available.

Mr. SPEAKER.—The Hon'ble Member cannot say that there is no Kannada-English Dictionary. Evidently he does not know it.

ಶ್ರೀ ಎಸ್. ಎಂ ಕೃಷ್ಣ.—ಒಂದು ಪಕ್ಷ ಅದು ನಮ್ಮ ಪುಸ್ತಕ ಭಂಡಾರದಲ್ಲಿದ್ದರೆ ವಿಧಾನ ಮಂಡಲದ ಅಧ್ಯಕ್ಷರನ್ನು ನಾನು ಅಭಿನಂದಿಸುತ್ತೇನೆ. ಈ ರಾಜ್ಯದ ಭಾಷೆಗೆ ಸಂಬಂಧಪಟ್ಟ ಈ ವಿಧೇಯಕವನ್ನು ಇಂದು ಮೈಸೂರು ರಾಜ್ಯದಲ್ಲಿ ಕನ್ನಡ ಮಾತನಾಡತಕ್ಕ ಎಲ್ಲ ಜನರೂ ಬಹಳ ಸಂತೋಷದಿಂದ ಸ್ವಾಗತಿಸಬೇಕಾಗಿದೆ. ನನ್ನ ಹಿಂದೆ ಮಾತನಾಡಿದ ಮಹಾರಾಷ್ಟ್ರ ಏಕೀಕರಣದ ಸಮಿತಿಯ ನಾಯಕರಾದ ಶ್ರೀಮಾನ್ ವಿ. ಎಸ್. ಪಾಟೀಲ್ ಅವರು ಈ ವಿಧೇಯಕದ ಬಗ್ಗೆ ಕೊಂಚಮಟ್ಟಿಗೆ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದರು. ನಾನಾದರೂ ಅವರಿಗೆ ತಿಳಿಸತಕ್ಕದ್ದು ಏನೆಂದರೆ, ಈ ವಿಧೇಯಕದ ನಾಲ್ಕನೆಯ ಪ್ರಕರಣದಲ್ಲಿ ಏನು ಅಳವಡಿಸಿದ್ದಾರೆಯೋ ಅದು ಬಹುಶಃ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರುಗಳು ಪ್ರತಿನಿಧಿಸುವ ನಮ್ಮ ರಾಜ್ಯದ ಕೆಲವು ಭಾಗಕ್ಕೆ ಖಂಡಿತವಾಗಿಯೂ ಅನ್ಯಾಯವಾಗುತ್ತದೆ ಎನ್ನತಕ್ಕಥಾದ್ದು ಕೊಂಚಮಟ್ಟಿಗೆ ಅಸಮಾಧಾನವನ್ನು ತರುವ ಅಂಶ. ನಾನಾದರೂ ಸರ್ಕಾರದವರನ್ನು ಪ್ರಾರ್ಥನೆ ಮಾಡತಕ್ಕದ್ದು ಏನೆಂದರೆ ಇದುವರೆಗೂ ಮಹಾರಾಷ್ಟ್ರದಲ್ಲಿ ಇದ್ದು ನಮ್ಮ ರಾಜ್ಯಕ್ಕೆ ನ್ಯಾಯಬದ್ಧವಾಗಿ ಬಂದು ಸೇರಿರತಕ್ಕಂಥ ಪ್ರದೇಶದ ಜನಗಳು ಕನ್ನಡವನ್ನು ಸರಿಯಾಗಿ ಕಲಿಯುವವರೆಗೂ ಇಂಥಾ ಒಂದು ಹೊರೆಯನ್ನು ಹಾಕುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ ಎನ್ನುವ ಭರವಸೆಯನ್ನು ಸರ್ಕಾರದವರು ಅವರಿಗೆ ಕೊಟ್ಟರೆ ಬಹುಶಃ ಅವರು ಈ ವಿಧೇಯಕವನ್ನು ವಿರೋಧಿಸುವುದಿಲ್ಲ ಎಂದು ನಾನು ಭಾವನೆ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಕನ್ನಡ ಭಾಷೆಯಾಗಬೇಕು. ಇದಕ್ಕೆ ಯಾವ ವಿಧವಾದ ಆಲ್ಟರ್‌ನೇಟೀವ್ ಇಲ್ಲ. ನಮ್ಮ ರಾಜ್ಯದ ಆಗುಹೋಗುಗಳು, ಏನಾಗುತ್ತವೆ, ನಮ್ಮ ರಾಜ್ಯದ ಸರ್ಕಾರ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಮತ್ತು ನಮ್ಮ ರಾಜ್ಯದ ಕಲ್ಯಾಣ ಸಾಧನೆಯಾಗಬೇಕಾದರೆ ಏನೇನು ಕೆಲಸ ಕಾರ್ಯಗಳು ಆಗಬೇಕು ಎನ್ನುವುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕಾದರೆ, ಪ್ರತಿಯೊಬ್ಬರಿಗೂ ಅರಿವು ಆಗಬೇಕಾದರೆ ನಮ್ಮ ರಾಜ್ಯದ ಎಲ್ಲಾ ಕೆಲಸ ಕಾರ್ಯಗಳ ಎಲ್ಲಾ ವ್ಯವಹಾರಗಳೂ ಎಲ್ಲಾ ಮಟ್ಟದಲ್ಲೂ ಕನ್ನಡದಲ್ಲಿಯೇ ನಡೆಯಬೇಕು. ಆದರೆ ಈಗ ನಾನು ಒಂದು ಅಂಶವನ್ನು ಈ ಸಭೆಯಲ್ಲಿ ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಅದು ಏನೆಂದರೆ ಚಾರಿತ್ರಿಕ ಆಕಸ್ಮಿಕವಾಗಿ ಇವೊತ್ತು ಇಂಗ್ಲೀಷ್ ಭಾಷೆ ನಮ್ಮ ದೇಶದಲ್ಲಿ ಉಳಿದುಕೊಂಡು ಬಂದಿದೆ. ಇಂಗ್ಲೀಷ್ ಭಾಷೆ ಬೆಳೆದುಕೊಂಡು ಬಂದಿದೆ. ಚಾರಿತ್ರಿಕ ಆಕಸ್ಮಿಕವಾಗಿ ನಮ್ಮ ದೇಶದಲ್ಲಿ ಬೆಳೆದುಕೊಂಡು ಬಂದಿರತಕ್ಕ ಇಂಗ್ಲೀಷನ್ನು ನಾವು ದೂಷಿಸುವುದರಿಂದ ಏನೂ ಪ್ರಯೋಜನವಿಲ್ಲ. ಆದರೆ ಅದರಿಂದ ಇವೊತ್ತು ನಮ್ಮ ದೇಶಕ್ಕೆ ಒಳ್ಳೆಯದಾಗಿದೆಯೋ ಅಥವಾ ಕೆಟ್ಟದ್ದಾಗಿದೆಯೋ ಅಂತೂ ಇಂಗ್ಲೀಷ್ ಭಾಷೆಯನ್ನು ನಾವು ನಮ್ಮ ದೇಶದಲ್ಲಿ ಇಟ್ಟುಕೊಂಡಿದ್ದೇವೆ. ಈ ವಿಧೇಯಕದ ಪ್ರಕಾರ 15 ವರ್ಷಗಳ ಕಾಲವಾದರೂ ಇಂಗ್ಲೀಷ್ ಭಾಷೆಯನ್ನು ಉಪಯೋಗಿಸತಕ್ಕಂಥ ಅವಕಾಶವನ್ನು ಇದು ಒದಗಿಸಿ ಕೊಟ್ಟಿದೆ. ಶ್ರೀಮಾನ್ ವಿ. ಎಸ್. ಪಾಟೀಲರು ತಿಳಿಸಿದರು, ತುರ್ತು ಪರಿಸ್ಥಿತಿಯಲ್ಲಿ ಇಂಥಾ ಒಂದು ವಿವಾದಾತ್ಮಕವಾದ ವಿಧೇಯಕವನ್ನು ಸರ್ಕಾರದವರು ಮಂಡಿಸಬಾರದಾಗಿತ್ತು ಎಂದು.

ಇದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಈ ವಿಧೇಯಕವನ್ನು ಯಾವ ದೃಷ್ಟಿಯಿಂದ ನೋಡಿದರೂ ಇದು ವಿವಾದಾತ್ಮಕವಾಗಿ ಆಗುವುದಿಲ್ಲ. ಒಂದು ಪಕ್ಷ ಇಂಗ್ಲೀಷ್ ಭಾಷೆಯನ್ನು ಉಪಯೋಗಿಸಬಾರದು ಎಂದು ಸರ್ಕಾರದವರು ನಿಷೇಧವನ್ನು ಹಾಕಿದ್ದರೆ ಅಥವಾ ಯಾವುದನ್ನು ರಾಷ್ಟ್ರಭಾಷೆಯನ್ನಾಗಿ ಮಾಡಬೇಕೆಂದು ಜನ ಹೊರಟಿದ್ದಾರೋ ಆ ಭಾಷೆಯನ್ನು ಎಂದರೆ ಹಿಂದಿಯನ್ನು ಬಲವಂತವಾಗಿ ನಮ್ಮಮೇಲೆ ಹೇರತಕ್ಕ ಅಭಿಪ್ರಾಯವೇನಾದರೂ ಇದ್ದರೆ ಆಗ ಈ ವಿಧೇಯಕ ವಿವಾದಾತ್ಮಕವಾಗುತ್ತಿತ್ತು. ಮತ್ತು ಹಲವಾರು ಭಿನ್ನಾಭಿಪ್ರಾಯಗಳಿಗೆ ಅವಕಾಶಮಾಡಿಕೊಡುತ್ತಿತ್ತು. ಆದರೆ ಅದೃಷ್ಟವಶಾತ್ ಅಂಥಾ ಯಾವ ಸೂಚನೆಗಳೂ ಈ ವಿಧೇಯಕದಲ್ಲಿ ಅಡಕವಾಗಿಲ್ಲ. ಆದ್ದರಿಂದ ಯಾವ ದೃಷ್ಟಿಯಿಂದ ನೋಡಿದರೂ ಇದು ಸರಳವಾದ ಮತ್ತು ಸುಂದರವಾದ ವಿಧೇಯಕವಾಗಿದೆ. ಇದನ್ನು ಅವರು ವಿರೋಧಮಾಡಬಾರದು ಎಂದು ನಾನು ಮನವಿಯನ್ನು ಮಾಡುತ್ತೇನೆ.

ಶ್ರೀಮತಿ ನಾಗರತ್ನಮ್ಮನವರು ಈ ಮಸೂದೆಯಮೇಲೆ ಮಾತನಾಡುವಾಗ ಕೆಲವು ಅಧಿಕಾರಿಗಳ ಮನೋಭಾವನೆಯನ್ನು ಪ್ರಶ್ನೆ ಮಾಡಿದರು. ಇಂಗ್ಲೀಷಿನಲ್ಲಿ ಮಾತನಾಡಿದರೆ ಅದು ದೊಡ್ಡವರ ಸಮಾಚಾರ, ಕನ್ನಡ ಮಾತನಾಡಿದರೆ ಕೈಯಾಳಾಗದವರ ಸಮಾಚಾರ, ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಿ ತನ್ನ ದೊಡ್ಡತನವನ್ನು ಪ್ರತಿಬಿಂಬಿಸಬೇಕು, ಎನ್ನುವ ಮನೋಭಾವನೆಯನ್ನುಳ್ಳ ಅಧಿಕಾರ ವರ್ಗದವರು ನಮ್ಮಲ್ಲಿದ್ದಾರೆಂದು ಅವರು ಹೇಳಿದರು. ಅವರಿಗೆ ನಾನು ಒಂದೇ ಒಂದು ಉದಾಹರಣೆಯನ್ನ ಕೊಡಬಲ್ಲೆ. ಕೇರಳ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಬಂದಿರುವ ಮುಖ್ಯ ಕಾರ್ಯದರ್ಶಿಗಳು ಎಲ್ಲಾ ಅಧಿಕಾರಿಗಳಿಗೂ ಮೇಲ್ಪಂಕ್ತಿಯನ್ನು ಹಾಕಿ ಕೊಟ್ಟಿದ್ದಾರೆ. ಕೆಲವು ದಿವಸಗಳ ಹಿಂದೆ ನಾನು ಪತ್ರಿಕೆಯಲ್ಲಿ ಓದಿದೆ, ಅವರು "ನಾನು ಮೈಸೂರಿಗೆ ಬಂದಿದ್ದೇನೆ, ಕನ್ನಡ ಭಾಷೆಯನ್ನು ಕಲಿಯಬೇಕು, ಕಲಿಯುತ್ತೇನೆ'' ಎಂದು ಹೇಳಿದ್ದರು. ಅವರು ಇವೊತ್ತು ಕನ್ನಡ ಭಾಷೆಯಲ್ಲಿ ಮಾತನಾಡತಕ್ಕ ಶಕ್ತಿಯನ್ನು ಸಂಪಾದನೆ ಮಾಡಿಕೊಂಡಿದ್ದಾರೆ. ಇಂಥಾ ಒಂದು ಮನೋಭಾವನೆ ನಮ್ಮ ಅಧಿಕಾರಿಗಳಲ್ಲಿ ಉಂಟಾದರೆ ಈ ವಿಧೇಯಕವನ್ನು ಖಂಡಿತವಾಗಿಯೂ ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವುದರಲ್ಲಿ ಯಾವ ವಿಧವಾದ ಅನುಮಾನವೂ ಇಲ್ಲ.

ನಾವು ಪರದೇಶಕ್ಕೆ ಹೋದಾಗ ಅಲ್ಲಿಯವರು ನಮ್ಮನ್ನು ಒಬ್ಬೊಬ್ಬರು ಒಂದೊಂದು ಪ್ರಶ್ನೆಯನ್ನ ಕೇಳುತ್ತಾರೆ. ಅವರು ನಮ್ಮನ್ನು ಇಂಡಿಯಾದೇಶದ ರಾಷ್ಟ್ರಭಾಷೆ ಯಾವುದು, ಒಂದು ಸಂಸ್ಥಾನದವರು ಇನ್ನೊಂದು ಸಂಸ್ಥಾನದವರೊಡನೆ ವ್ಯವಹಾರವನ್ನು ಮಾಡಬೇಕಾಗಿದ್ದರೆ ಯಾವ ಭಾಷೆಯಲ್ಲಿ ವ್ಯವಹಾರ ಮಾಡುತ್ತಾರೆ ಎಂದು ವಿಧವಿಧವಾದ ಪ್ರಶ್ನೆಗಳನ್ನು ಕೇಳುತ್ತಾರೆ. ಆಗ ಅವರ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಕೊಂಚಮಟ್ಟಿಗೆ ನಮಗೆ ನಾಚಿಕೆಯಾಗುತ್ತದೆ. ನಮ್ಮ ದೇಶದಲ್ಲಿ ಒಂದು ರಾಷ್ಟ್ರ ಭಾಷೆಯನ್ನು ನಾವು ಕಲ್ಪಿಸಿಕೊಂಡಿಲ್ಲ. ರಾಷ್ಟ್ರ ಭಾಷೆಯನ್ನು ಬೆಳೆಸಿಕೊಂಡು, ರೂಢಿಸಿಕೊಂಡು ಬಲಪಡಿಸತಕ್ಕಂಥ ಶಕ್ತಿ ನಮಗೆ ಬರಲಿಲ್ಲವಲ್ಲ ಎನ್ನತಕ್ಕಂಥ ಒಂದು ಸಂಕಟ ನಮ್ಮನ್ನು ಬಾಧಿಸುತ್ತದೆ. ಇದಕ್ಕೆ ಯಾರೂ ಆಕ್ರೋಶ ಮಾಡಬೇಕಾಗಿಲ್ಲ, ಆರೋಪಣೆ ಮಾಡಬೇಕಾಗಿಲ್ಲ. ಚಾರಿತ್ರಿಕ ಆಕಸ್ಮಿಕವಾಗಿ ಭಾರತೀಯರಾದ ನಾವು ಎಲ್ಲಾ ಸಮಸ್ಯೆಗಳನ್ನೂ ಕೂಡ ಎದುರಿಸಬೇಕಾಗಿದೆ. ಇವೊತ್ತು ಹಿಂದಿಯನ್ನು ನಮ್ಮ ಮೇಲೆ ಬಲವತ್ತರವಾಗಿ ಹೇರುವ ಸಂದರ್ಭವಿರುವಾಗ ದಕ್ಷಿಣ ದೇಶಗಳವರು ಅದನ್ನು ವಿರೋಧಿಸಲು ಸಾಧ್ಯವೆ ? ಹಿಂದಿಯನ್ನು ಬಲವಂತವಾಗಿ ನಮ್ಮ ಮೇಲೆ ಹೇರಬಾರದೆಂದು ಈಗ ಕೆಲವರು ಹೇಳುತ್ತಿದ್ದಾರೆ. ಆದರೆ ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡುವ ಪ್ರಯತ್ನವನ್ನು ಬಿಟ್ಟರೆ ರಾಷ್ಟ್ರಕ್ಕೆ ಬೇರೊಂದು ರಾಷ್ಟ್ರಭಾಷೆಯನ್ನು ಹೊಂದಾವಣಿಕೆ ಮಾಡುವುದು ಕಷ್ಟವಾಗುತ್ತದೆ. ಇದೊಂದು ಧರ್ಮಸಂಕಟ. ಆದುದರಿಂದ ಈ ಸಂಕಟದಿಂದ ಪಾರಾಗಲು ನಾವು ಬಹಳ ದೂರದೃಷ್ಟಿಯಿಂದ ಆಲೋಚಿಸಿ ಆಕ್ರೋಶಗಳಿಗೆ ಮತ್ತು ವೈಮನಸ್ಯಗಳಿಗೆ ಅವಕಾಶ ಕೊಡದೆ ಎಲ್ಲ ಭಾಗಗಳನ್ನೂ ಆಲೋಚಿಸಿ ಒಂದು ಕಾರ್ಯ ಮಾಡಬೇಕಾಗಿದೆ. ಈ ರಾಜಭಾಷೆಗೆ ಸಂಬಂಧಪಟ್ಟ ಈ ವಿಧೇಯಕವನ್ನು ಈ ಸಭೆ ಅಂಗೀಕಾರ ಮಾಡಬಹುದು. ಆದರೆ ಇದನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಸರ್ಕಾರಕ್ಕಿದೆ. ಈ ದಿವಸ ಕನ್ನಡ ಟೈಪ್‌ರೈಟರ್ ವಿಚಾರದಲ್ಲಿ ಕೆಲವು ಮಂದಿ ಸದಸ್ಯರು ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ಈಗ ಇನ್‌ಫರ್ಮೇಷನ್ ಇಲಾಖೆಯಲ್ಲಿ ಒಂದು ಕನ್ನಡ ಟೈಪ್‌ರೈಟರ್ ಇದೆ. ಅದು ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ತಿಳಿಯುವುದಕ್ಕೆ ನಾನು ಅಲ್ಲಿಗೆ ಹೋದಾಗ ಅದರಿಂದ ಟೈಪು ಮಾಡುವುದು ಬಹಳ ಕಷ್ಟ, ಕೈಗಳಿಗೆ ಬಹಳ ಶ್ರಮವಾಗುತ್ತದೆ ಎಂದು ಹೇಳಿದರು. ಇವೊತ್ತು ಸರ್ಕಾರ ತಾಲ್ಲೂಕು ಅಭಿವೃದ್ಧಿ ಮಂಡಲ, ಜಿಲ್ಲಾ ಕಚೇರಿ ಮುಂತಾದ ಕಡೆಗಳಲ್ಲೆಲ್ಲ ಕನ್ನಡ ಟೈಪ್‌ರೈಟರನ್ನು ಉಪಯೋಗಿಸಬೇಕೆಂದು ನಿಯಮ ಮಾಡುವುದು ಅತಿ ಅಗತ್ಯವಾಗಿದೆ. ಏಕೆಂದರೆ ಟೈಪ್‌ರೈಟರುಗಳನ್ನು ತಯಾರಿಸುವ ಸಂಸ್ಥೆಗೆ ಕೇವಲ ಕೆಲವೇ ಆರ್ಡರುಗಳು ಬಂದರೆ ಆ ಸಂಸ್ಥೆಯವರು ಟೈಪರೈಟರುಗಳನ್ನು

(ಶ್ರೀ ಎಸ್. ಎಂ. ಕೃಷ್ಣ)

ತಯಾರಿಸುವರೋ ಇಲ್ಲವೋ ಗೊತ್ತಿಲ್ಲ. ಒಟ್ಟಿನಲ್ಲಿ ಕನ್ನಡಭಾಷೆ ಉದ್ಧಾರವಾಗಬೇಕಾದರೆ ಬೆಳೆಯಬೇಕಾದರೆ ಅದಕ್ಕೇನು ಅನುಕೂಲ ಬೇಕೋ ಅದನ್ನು ಕಲ್ಪಿಸುವ ಜವಾಬ್ದಾರಿ ಸರ್ಕಾರಕ್ಕೆ ಸೇರಿದೆ. ಅದನ್ನು ಬಹಳ ನಿಷ್ಠೆಯಿಂದ ಜಾಗರೂಕತೆಯಿಂದ ಮತ್ತು ಉತ್ಸಾಹದಿಂದ ನಿರ್ವಹಿಸಲು ಸರ್ಕಾರವು ಸೂಕ್ತನಿಲುವನ್ನು ತಳೆಯಬೇಕೆಂದು ನಾನಾದರೂ ಕೇಳಿಕೊಳ್ಳುತ್ತೇನೆ.

ಒಟ್ಟಿನಲ್ಲಿ ಎಂದೋ ಬರಬೇಕಾಗಿದ್ದ ಈ ವಿಧೇಯಕವನ್ನು ಈಗಲಾದರೂ ಮುಖ್ಯಮಂತ್ರಿಗಳು ಮಂಡಿಸಿದರಲ್ಲಾ ಎಂಬ ಸಮಾಧಾನದಿಂದ ನಾನು ಈ ವಿಧೇಯಕವನ್ನು ಸ್ವಾಗತಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಮಾನ್ಯ ಸಭೆಯ ಮುಂದೆ ಸರ್ಕಾರದವರು ಮಂಡಿಸಿರುವ ಮೈಸೂರು ರಾಜ್ಯಭಾಷೆಗೆ ಸಂಬಂಧಪಟ್ಟ ವಿಧೇಯಕವನ್ನು ನಾನು ಸ್ವಾಗತಿಸುತ್ತಾ ಸರ್ಕಾರ ಇಷ್ಟು ವಿಳಂಬ ಮಾಡಿದ್ದಕ್ಕಾಗಿ ಅದನ್ನು ಖಂಡಿಸುತ್ತೇನೆ. ಎರಡನೆಯದಾಗಿ, ಈ ಮಸೂದೆ ಹೇಗಿದೆಯೆಂದರೆ, ಕನ್ನಡನಾಡಿನ ಮುಗ್ಧ ಜನತೆಯನ್ನು ಮೋಸಗೋಳಿಸುವುದಕ್ಕೆ ನಡೆದಿರತಕ್ಕ ರಾಜಕೀಯ ಕುಟಿಲಪ್ರಯತ್ನಗಳ ಫಲವಾಗಿ ನಮ್ಮ ಮುಂದೆ ಬಂದಿರುವ ಮಾಯಾಮೃಗ ಎಂದು ನಾನು ಹೇಳದೆ ವಿಧಿಯಿಲ್ಲ. ಇದು ಮಾಯಾಮೃಗದ ವೇಷದಲ್ಲಿರುವ ಮಾರೀಚ ಎಂದು ನಾನು ಹೇಳಬೇಕಾಗುತ್ತದೆ.

ಕೆಲವು ಮಾನ್ಯ ಸದಸ್ಯರು ಭಾಷಣ ಮಾಡುತ್ತಿದ್ದುದನ್ನು ಕೇಳುತ್ತಿದ್ದಾಗ ಅದರಲ್ಲೂ ಮುಖ್ಯವಾಗಿ ನನ್ನ ಮಾನ್ಯ ಸ್ನೇಹಿತರಾದ ಮೇಜರ್ ಡಿಮೆಲೋರವರು ಭಾಷಣ ಮಾಡುವುದನ್ನು ಕೇಳುತ್ತಿದ್ದಾಗ ಈ ಸಭೆಯಲ್ಲಿ ನಾನು ತಲೆಕೆಳಕಾಗಿ ನಿಂತಿದ್ದೇನೋ ಎಂದು ಅನ್ನಿಸಿತು. ಟಿಪ್ಪುಸುಲ್ತಾನರನ್ನು ಕಾರ್ನವಾಲೀಸ್ ಕೊಲ್ಲದೆ ಹೋಗಿದ್ದರೆ ಈ ದೇಶದ ಇತಿಹಾಸವೇ ಬೇರೆಯಾಗುತ್ತಿತ್ತು ಎಂದು ನಾನು ಹೇಳಬಲ್ಲೆ. ಈ ದೇಶ 6 ಸಾವಿರ ವರ್ಷಗಳಿಂದ ಬದುಕಿದೆ ಎಂದು ಇತಿಹಾಸ ಹೇಳುತ್ತದೆ. ಬ್ರಿಟಿಷರು ಈ ದೇಶಕ್ಕೆ ಎರಡುನೂರು ವರ್ಷಗಳಿಂದೀಚೆಗೆ ಬಂದವರೆಂದೂ ಹೇಳುತ್ತದೆ. ಹಾಗಾದರೆ 5,800 ವರ್ಷಗಳವರೆಗೆ ಯಾರೂ ಈ ದೇಶದಲ್ಲಿರಲಿಲ್ಲವೆ? ಇಂಗ್ಲಿಷ್ ಭಾಷೆಗೆ ಮುಂಚೆ ಇಲ್ಲಿ ಜನರು ತಮ್ಮ ಭಾಷೆಯ ಮೂಲಕ ಮಾತನಾಡುತ್ತಿರಲಿಲ್ಲವೆ ಎಂಬ ಶಂಕೆ ಬರುತ್ತದೆ. ಆದುದರಿಂದ ಇತಿಹಾಸವನ್ನು ಸುಳ್ಳುಮಾಡುವ ಪ್ರಯತ್ನಗಳನ್ನು ಯಾರೂ ಮಾಡುವುದು ಅಷ್ಟು ಸಮಂಜಸವಲ್ಲ ಎಂದು ನನಗನ್ನಿಸುತ್ತದೆ. ಇದು ಇತಿಹಾಸದಿಂದ ಉಂಟಾಗಿರುವ ಒಂದು ಆಕಸ್ಮಿಕ ಘಟನೆಯೆಂದು ನಾನು ಒಪ್ಪುತ್ತೇನೆ. ಆದರೂ ಇದನ್ನು ಇಂದು ಮುಂದುವರಿಸುವುದಕ್ಕೆ ಯಾರಾದರೂ ಪ್ರಯತ್ನ ಮಾಡುವುದಾದರೆ ದೊಡ್ಡ ಪ್ರವಾಹದ ಎದುರು ಹೋಗಲೆತ್ನಿಸುವ ಒಂದು ಹಂಚಿಕಡ್ಡಿಯ ಹಾಗೆ ಆದೀತು. ಇನ್ನು ಇಲ್ಲಿ ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ ಅವುಗಳ ಬಗ್ಗೆ ಒಂದು ಮಾತು ಹೇಳಬೇಕು. ವಿರೋಧಪಕ್ಷದ ಶ್ರೀ ಶಿವಪ್ಪನವರು ಇಂಗ್ಲೀಷಿಗೆ ಬದಲು ನಮ್ಮ ಮೇಲೆ ಹಿಂದಿಯನ್ನು ಹೇರುವುದನ್ನು ವಿರೋಧಿಸುತ್ತೇನೆ ಎಂದು ಹೇಳಿದರು. ಅವರ ಪಕ್ಷಕ್ಕೆ ಸೇರಿದ ಶ್ರೀ ಕೃಷ್ಣರವರು ಹಿಂದಿಯನ್ನು ಬಿಟ್ಟರೆ ಈ ರಾಷ್ಟ್ರಕ್ಕೆ ಬೇರೊಂದು ರಾಷ್ಟ್ರಭಾಷೆಯನ್ನು ಹೊಂದುವುದು ಕಷ್ಟವಾಗುತ್ತದೆ, ಇದೊಂದು ಧರ್ಮಸಂಕಟ ಎಂದು ಹೇಳಿದರು. ನಾವು ಹಿಂದಿ ಕಲಿಯಬೇಕಾಗುತ್ತದೆ, ಅದನ್ನು ರಾಷ್ಟ್ರಭಾಷೆಯಾಗಿ ಒಪ್ಪಿಕೊಳ್ಳಬೇಕಾಗುತ್ತದೆ ಎಂದು ಸಮಾಧಾನ ಹೇಳಿದರು. ಅದನ್ನು ಶ್ರೀ ಶಿವಪ್ಪನವರು ಗಮನಿಸಬೇಕು. ಅದೇ ಮಾತನ್ನೇ ನಾನು ಶ್ರೀ ಶಿವಪ್ಪನವರಿಗೆ ಉತ್ತರವಾಗಿ ಕೊಡಬಯಸುತ್ತೇನೆ. ಶ್ರೀ ಮುಕ್ಕಣ್ಣಪ್ಪನವರು ಈ ದೇಶದಲ್ಲಿ ಇಂಗ್ಲೀಷ್ ನಿರಾತಂಕವಾಗಿ ಉಳಿಯಬೇಕೆಂಬ ಒಂದು ಸಭೆಯ ಅಧ್ಯಕ್ಷತೆಯನ್ನು ಈಚೆಗೆ ಮೈಸೂರಿನಲ್ಲಿ ವಹಿಸಿ ಬಂದಿದ್ದಾರೆ. ಅವರು ಕನ್ನಡ ಆಡಳಿತಭಾಷೆ ಮಾಡುವ ಮುಂಚೆ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಮುದ್ರಿಸಲು ಪ್ರಯತ್ನಮಾಡಿ ಎಂದು ಒಂದು ರೀತಿಯಲ್ಲಿ ಹೇಳಿದರು. ನೀರಿಗೆ ಹಾರುವುದಕ್ಕೆ ಮುಂಚೆ ಈಜು ಬರುವುದಿಲ್ಲ ಎಂದು ಈಜು ಬಲ್ಲವರು ಹೇಳುತ್ತಾರೆ. ನೀರಿಗೆ ಹಾರದೆ ನೆಲದ ಮೇಲೆ ಏನೇ ಮಾಡಿದರೂ ಈಜು ಬರುವುದಿಲ್ಲ. ಹೊಳೆಗೆ ಬೀಳಬೇಕು, ನೀರು ಕುಡಿಯಬೇಕು, ಕೈಕಾಲು ಬಡಿಯಬೇಕು, ದಡ ಸೇರಬೇಕು, ಇದು ಇರುವ ನಿಯಮ. ಈಜಿ ಬದುಕಬೇಕೆಂದು ಹೇಳಿದರೆ ನೀರು ಕುಡಿಯುವ ಮತ್ತು ಮುಳುಗುವ ಅಪಾಯ ಇದ್ದೇ ಇದೆ.

ಶ್ರೀ ಮುಕ್ಕಣ್ಣಪ್ಪನವರು ತಮ್ಮ ನಿಲುವನ್ನು ಸ್ಪಷ್ಟಪಡಿಸಲಿಲ್ಲ. ಬಹಳ ಡೋಲಾಯಮಾನವಾಗಿ ಮಾತನಾಡಿದರು. ಕೇವಲ ಸರಕಾರದವರು ಏನು ಮಾಡಿದ್ದಾರೆ, ಏನು ಮಾಡಿದ್ದಾರೆ ಎಂದು ಪ್ರಶ್ನಿಸುವುದರಲ್ಲಿಯೇ ಭಾಷಣವನ್ನು ಮುಗಿಸಿಬಿಟ್ಟರು. ಅವರಿಗೆ ನಾನು ಹೇಳುತ್ತೇನೆ-ಮುಕ್ಕಣ್ಣಪ್ಪನವರೆ ನೀವು ಮೂವತ್ತು ವರ್ಷ ನೆಲದ ಮೇಲೆ ಹೊಟ್ಟೆ ಹೊಸೆದರೂ ನಿಮಗೆ ಈಜು ಬಾರದು ಎಂದು.

ಇನ್ನು ಶ್ರೀ ವಿ. ಎಸ್. ಪಾಟೀಲರು ಯುದ್ಧ ಪರಿಸ್ಥಿತಿಯ ನೆಪ ಮುಂದೊಡ್ಡಿ, ಈ ಮಸೂದೆಯನ್ನು ಏಕೆ ಸರಕಾರದವರು ಈಗ ತಂದರು ಎಂದು ಕೇಳಿದರು. ಬೀಸುವ ದೊಣ್ಣೆ ಸ್ವಲ್ಪ ಮುಂದೆ

ಹೋಗಲಿ ಅನ್ನುವುದೇ ಶ್ರೀ ಪಾಟೀಲರ ಅಭಿಪ್ರಾಯ. ಬಹಳ ದಿವಸ ಈ ದೊಣ್ಣೆ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟರೆ ಅದು ತಲೆಗೆ ಬಡಿಯುತ್ತದೆ. ಕನ್ನಡದ ದೊಣ್ಣೆಗೆ ಕಾಲ ಬಂದಿದೆ. ಆದುದರಿಂದ ಅದು ಬಡಿಯುತ್ತದೆ. ಅದರ ಹತ್ತಿರ ಯಾರು ಹೋದರೂ ಬಡಿಯುತ್ತದೆ. ಕನ್ನಡ ದೊಣ್ಣೆ ಬಹಳ ಮೃದುವಾಗಿತ್ತು, ಈಗ ಅದು ಗಟ್ಟಿಯಾಗಿದೆ. ಯಾರು ಅದಕ್ಕೆ ತಲೆ ಕೊಡುತ್ತಾರೆಯೋ ಅವರ ತಲೆ ಸಹಸ್ರ ಹೋಳು ಆಗುವುದು.

ಶ್ರೀ ಬಿ. ಪಿ. ಕದಂ (ಕಾರವಾರ್).—ಮಹಾರಾಷ್ಟ್ರರ ತಲೆಗಳೂ ಹೋಳಾಗುತ್ತವೆಯಾ ?

ಶ್ರೀ ಎಸ್. ಗೋಪಾಲಗೌಡ.—ದೊಣ್ಣೆಗೆ ಯಾರ ತಲೆ ಅನ್ನುವುದು ತಿಳಿಯದು. ತಲೆ ಕೊಡುವವನಿಗೆ ಅದು ತಿಳಿಯಬೇಕು, ದೊಣ್ಣೆಗೆ ತಿಳಿಯದು. ಆದ್ದರಿಂದ ಈಗಿರುವ ಪರಿಸ್ಥಿತಿಯಿಂದ ಈ ಮಸೂದೆಯನ್ನು ಮುಂದಕ್ಕೆ ಹಾಕಬೇಕು ಎಂದು ಹೇಳುವ ನಮ್ಮ ಮಹಾರಾಷ್ಟ್ರಗೆಳೆಯರಿಗೆ ನಾನು ಏನು ಹೇಳಬೇಕು ?

ಅಧ್ಯಕ್ಷರು.—ಬಿಲ್ಲಿನ ಯಾವ ಅಂಶವನ್ನು ಹೇಳುತ್ತಿದ್ದೀರ ?

ಶ್ರೀ ಎಸ್. ಗೋಪಾಲ ಗೌಡ.—ಪೂರ ಅಂಶ ಸೇರಿ ನಾನು ಮಾತನಾಡುತ್ತೇನೆ. ಮಹಾರಾಷ್ಟ್ರದಲ್ಲಿ ಗುಜರಾತಿ ಮತ್ತು ಮರಾಠಿ ಇಬ್ಬರು ಜನರೂ ಒಟ್ಟಿಗೆ ಇರಬಾರದು ಎಂದು ಹೇಳಿ ಚಳುವಳಿ ಮಾಡಿದ ಜನರು, ಕನ್ನಡ ಜನರ ಸಹನೆಯನ್ನು ಅಸಮರ್ಥತೆ ಎಂದು ತಿಳಿದು ಸವಾಲು ಹಾಕುವುದಾದರೆ, ಅದು ನಾವು ವಿಚಾರ ಮಾಡಬೇಕಾದ ವಿಷಯವಾಗುತ್ತದೆ. ನೀವು, ಮಹಾರಾಷ್ಟ್ರೀಯರು ಈ ಸಭೆಯಲ್ಲಿ ಮಾತನಾಡುವುದನ್ನು, ನಾನು ಯಾವತ್ತೂ ವಿರೋಧ ಮಾಡಿಲ್ಲ. ನೀವು ಮರಾಠಿಯಲ್ಲಿ ಮಾತನಾಡಿ. ಮೇಜರ್ ಡಮೆಲೊರವರು ಇಂಗ್ಲೀಷಿನಲ್ಲಿ ಮಾತನಾಡಲಿ. ಶ್ರೀ ಆಂಜನೇಯ ರೆಡ್ಡಿಯವರು ಇಷ್ಟಪಟ್ಟರೆ ತೆಲುಗಿನಲ್ಲೇ ಮಾತನಾಡಲಿ. ಶ್ರೀ ವಿದ್ಯಾಧರ ಗುರುಜಿಯವರು ಹಿಂದಿಯಲ್ಲಿ ಮಾತನಾಡಲಿ. ಅದು ಅನಿವಾರ್ಯ, ನಾವು ಸಹಿಸಬೇಕಾಗುತ್ತದೆ. ಅವರ ಭಾಷಣಗಳನ್ನು ನಾವು ಕನ್ನಡಿಸಿ ಸಹನೆಯಿಂದ ಕೇಳೋಣ ; ಆ ಸಹನೆ ನಮಗೆ ಬರಲಿ. ಆದರೆ ಕನ್ನಡ ನಾಡಿನಲ್ಲಿ ರಾಜ್ಯಭಾಷೆ ಕನ್ನಡವಾದರೆ ಅನಾಹುತಕ್ಕೆ ಎಡೆ ಕೊಡುತ್ತದೆ ಎಂದು ಹೇಳುವುದಾದರೆ, ಆ ಮಾತು ಇಂದು ಸತ್ಯವಾಗಲಾರದು. ಬಾರತ ದೇಶದಲ್ಲಿ ಅನೇಕ ಭಾಷೆಗಳನ್ನು ಆಡುವ ಜನರು ಇದ್ದಾರೆ. ಮರಾಠಿ, ತೆಲುಗು, ತಮಿಳು ಮತ್ತು ಮಲಯಾಳಿ ಭಾಷೆಗಳನ್ನು ಆಡತಕ್ಕಂಥ ಜನರ ಮಧ್ಯೇ ನಾವು, 2 ಕೋಟಿ 35 ಲಕ್ಷ ಜನರು ಇದ್ದೇವೆ. ಈ ಎಲ್ಲ ಜನರೂ ಸೇರಿ ಭಾರತವಾಗಿದೆ. ಯಾವ ಭಾಗವನ್ನು ಬಿಟ್ಟರೂ ಭಾರತದ ಚಿತ್ರ, ನಕ್ಷೆ ಪೂರ್ಣವಾಗುವುದಿಲ್ಲ. ಇವರೆಲ್ಲಾ ಸೇರಿಯೇ ಭಾರತೀಯರು ಅನ್ನುವುದು. ಆದ್ದರಿಂದ ಕನ್ನಡ ಭಾಷೆ ರಾಜ್ಯಭಾಷೆ ಆಗಬೇಕು ಅನ್ನತಕ್ಕಂಥ ಬೇಡಿಕೆಯಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ, ಉದ್ರೇಕವೂ ಇಲ್ಲ. ಆದರೆ ಶ್ರೀ ವಿ. ಎಸ್. ಪಾಟೀಲರು ಕನ್ನಡ ನಾಡಿನಲ್ಲಿರತಕ್ಕಂಥ ಕನ್ನಡೇತರರಿಗೆ ಏನು ರಕ್ಷಣೆ ಕೇಳುತ್ತಾರೆಯೋ ಆ ರಕ್ಷಣೆ ಸರಕಾರ ಕೊಡಬೇಕಾಗುತ್ತದೆ. ಅದು ಮೂಲಭೂತ ಹಕ್ಕಿಗೆ ಸಂಬಂಧಪಟ್ಟ ಪ್ರಶ್ನೆ. ನಾನು ಮುಂಬಯಿನಲ್ಲಿರತಕ್ಕಂಥ ಕನ್ನಡಿಗರ ಬಗ್ಗೆ ಏನನ್ನು ಕೇಳಬೇಕಾಗಿರುವುದೋ ಅದನ್ನು ಕನ್ನಡೇತರರು ಕರ್ಣಾಟಕದಲ್ಲಿದ್ದರೆ ಬೇಡುವುದಕ್ಕೆ, ಕೇಳುವುದಕ್ಕೆ ಯಾವತ್ತೂ ಹಕ್ಕು ಇರುತ್ತದೆ. ಅದನ್ನು ಯಾರೂ ಅಲ್ಲಗಳೆಯುವುದಿಲ್ಲ. ಸಭೆಯಲ್ಲಿ ಇತರರೂ ಅಲ್ಲಗಳೆಯಲಾರರು. ಅದು ಮೂಲಭೂತವಾದ ಹಕ್ಕು. ಮಾತೃಭಾಷೆಯಲ್ಲಿಯೇ ಪ್ರತಿಯೊಬ್ಬರಿಗೂ ವಿದ್ಯಾಭ್ಯಾಸ ದೊರೆಯಬೇಕು, ಅವರ ಮಾತೃಭಾಷೆಯಲ್ಲಿಯೇ ಅವರು ಮಾತನಾಡಬೇಕೆಂಬುದು ಉದ್ದೇಶ. ಆದ್ದರಿಂದ ಈ ಸಭೆಯಲ್ಲಿ ಗೊಂದಲವನ್ನು ಉಂಟುಮಾಡತಕ್ಕಂಥ ಪ್ರಯತ್ನ ಸಲ್ಲದು ಎಂದು ಮಾತ್ರ ನಾನು ಹೇಳಬಯಸುತ್ತೇನೆ.

ಈ ರಾಜ್ಯದಲ್ಲಿ ಕನ್ನಡೇತರರು ಬಹಳ ಜನರಿದ್ದಾರೆ. ಬಹುಶಃ ಬೆಂಗಳೂರಿನಲ್ಲಿ ಸುಮಾರು 60 ಭಾಷೆಗಳನ್ನು ಆಡತಕ್ಕಂಥ ಜನರು ಇದ್ದಾರೆಂದು ಕೇಳಿದ್ದೇನೆ. ಅದರಲ್ಲಿ ನಗರವನ್ನೇ ತೆಗೆದುಕೊಂಡರೆ ತಮಿಳು, ತೆಲುಗು, ಮಲಯಾಳಿ, ಉರ್ದು ಮತ್ತು ಇಂಗ್ಲೀಷು ಭಾಷೆ ಆಡತಕ್ಕಂಥ ಬಹಳ ಜನರಿರಬೇಕು. ತುಳು ಆಡುವವರೂ ಬಹಳ ಜನರಿದ್ದಾರೆ. ಕೊಂಕಣಿ ಮಾತನಾಡುವವರೂ ಇದ್ದಾರೆ. ಹೀಗೆ ಅನೇಕ ಭಾಷೆಗಳನ್ನು ಹೊಂದಿದ್ದೇವೆ. ಶ್ರೀ ಪಾಟೀಲರು ಶ್ರೀ ಹನುಮಂತಯ್ಯನವರ ಒಂದು ಭಾಷಣದ ಒಂದು ತುಂಡನ್ನು ಇಲ್ಲಿ ಉದರಿಸಿದರು. ಶ್ರೀ ಪಾಟೀಲರು ಇದು ಭಾಷಾವಾರು ರಾಜ್ಯ ಅಲ್ಲ ಎಂದು ಹೇಳುವುದಾದರೆ, ಅದು ನಿಜವಲ್ಲ. ಇದು ಭಾಷಾವಾರು ರಾಜ್ಯ. ಭಾಷಾವಾರು ತಳಹದಿಯನ್ನು ನಾವು ಒಪ್ಪಿದ್ದೇವೆ. ದೇಶದ ಒಂದು ಕಡೆಯಿಂದ ಒಂದು ಕಡೆಗೆ ಬಂದರೆ, ಪ್ರತಿ ಪ್ರಾಂತ್ಯದಲ್ಲಿಯೂ ಆಯಾ ಭಾಷೆಯನ್ನು ಆಡತಕ್ಕಂಥ ಜನರು ಹೆಚ್ಚು ಇದ್ದುದರಿಂದಲೇ ನಾವು ಒಪ್ಪಿಕೊಳ್ಳಬೇಕಾಯಿತು. ಆದುದರಿಂದ ಮಹಾತ್ಮ ಗಾಂಧಿಯವರೂ ಅದನ್ನು ಒತ್ತಾಯಮಾಡಿ ಹೇಳಿರುತ್ತಾರೆ. ಎಲ್ಲ ತಜ್ಞರೂ, ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರುವವರೆಲ್ಲರೂ, ಅದನ್ನು ಒಪ್ಪುತ್ತಾರೆ. ಇದು ಪ್ರಶ್ನೆ ಮಾಡತಕ್ಕಂಥ ವಿವಾದದ

(ಶ್ರೀ ಎಸ್. ಗೋಪಾಲಗೌಡ)

ಪ್ರಶ್ನೆ ಏನೂ ಅಲ್ಲ. ಬಂಗಾಳದಲ್ಲಿ ಬಂಗಾಳಿ ಭಾಷೆಯನ್ನು ಒಪ್ಪಿಕೊಂಡಿದ್ದಾರೆ. ಪಂಜಾಬಿನಲ್ಲಿ ಪಂಜಾಬಿಯನ್ನು ಒಪ್ಪಿಕೊಂಡಿದ್ದಾರೆ. ತಮಿಳುನಾಡಿನಲ್ಲಿ ತಮಿಳನ್ನು ಒಪ್ಪಿಕೊಂಡಿದ್ದಾರೆ. ಕರ್ಣಾಟಕ ಜನ ಕನ್ನಡವನ್ನು ಒಪ್ಪಿಕೊಳ್ಳುತ್ತಾರೆ. ಇದರಲ್ಲಿ ಯಾವ ಒಂದು ದೊಡ್ಡ ಗೊಂದಲದ ಪ್ರಶ್ನೆ ಇಲ್ಲ. ಆದ್ದರಿಂದ ಅಂತರರಾಜ್ಯಗಳಲ್ಲಿ ವಾಸಮಾಡತಕ್ಕಂಥ ಜನರ ಸಮಸ್ಯೆ, ಅಂತರ ರಾಷ್ಟ್ರಗಳಲ್ಲಿ ನೆಲಸತಕ್ಕಂಥ ಓಡಾಡತಕ್ಕಂಥ ಜನರ ಸಮಸ್ಯೆ, ಇದು ಜಗತ್ತಿನ ಮುಂದೆ ಯಾವಾಗಲೂ ಇದೆ. ಕೃಶ್ಚೇವರು ಬೆಂಗಳೂರಿನಲ್ಲಿ ಬಂದು ಭಾಷಣ ಮಾಡಿದಾಗ ಇಂಗ್ಲೀಷಿನಲ್ಲಿ ಮಾತನಾಡಲಿಲ್ಲ. ಅವರ ಭಾಷೆಯಲ್ಲಿಯೇ ಮಾತನಾಡಿದರು. ಅದನ್ನು ತರ್ಜುಮೆ ಮಾಡಿಸಿ ಕೇಳಿದೆವು. ಎಲ್ಲರೂ ನಮ್ಮ ಭಾಷೆಯಲ್ಲಿಯೇ ಮಾತನಾಡಬೇಕು ಅನ್ನತಕ್ಕಂಥ ಅಗ್ರಹ ಉಚಿತವಾದುದಲ್ಲ. ಹಾಗೆಯೇ ಮೇಜರ್ ಡಿಮೆಲೊರವರು ಇಂಗ್ಲೀಷು ಮೂಲಕವೇ ಜಗತ್ತು ಪ್ರಗತಿಯನ್ನು ಸಾಧಿಸಿತು ಎಂದು ಹೇಳುವುದಾದರೆ ಆ ಮಾತು ಅಷ್ಟು ನಿಜವಲ್ಲ. ಇಂಗ್ಲೀಷಿನ ಮೂಲಕವೇ ಜಗತ್ತಿನ ಪ್ರಗತಿ ಸಾಧಿಸಿಲ್ಲ. ಸಾಧಿಸಿದ್ದ ಪಕ್ಷದಲ್ಲಿ ಸ್ಪುಟನಿಕ್ಕನ್ನು ಬ್ರಿಟನ್ನಿನವರು ಬಿಡಬೇಕಾಗಿತ್ತು. ಅಥವಾ ಜರ್ಮನಿಯು ಅವರ ಗುಲಾಮರಾಗಿ ಇರಬೇಕಾಗಿತ್ತು. ಅದು ಬ್ರಿಟಿಷರ ಸೂರ್ಯ ಮುಳಗದಿದ್ದ ಸಾಮ್ರಾಜ್ಯದಲ್ಲಿ, ಆ ಕಾಲದಲ್ಲಿ ಈ ಒಂದು ಭಾಷೆ ಪ್ರಸಾರಕ್ಕೆ ಬಂದಿತ್ತು. ಈಗ ಬ್ರಿಟಿಷ್ ಕಾಮನ್‌ವೆಲ್ತ್ ಸೇರಿರತಕ್ಕಂಥ ರಾಜ್ಯಗಳಲ್ಲಿ, ಕಾಮನ್‌ವೆಲ್ತ್‌ನಲ್ಲಿಯೇ ಉಳಿದಿರತಕ್ಕಂಥ ರಾಜ್ಯಗಳಲ್ಲಿ, ಇಂಥ ಕಡೆಗಳಲ್ಲಿ ಇಂಗ್ಲೀಷನ್ನು ಬಳಸುತ್ತಾ ಇದ್ದಾರೆ. ಅಮೇರಿಕ, ಆಸ್ಟ್ರೇಲಿಯದ ಮಾತು ಬೇರೆ. ಅದಕ್ಕೆ ಕಾರಣಗಳಿವೆ. ನಾವು ಈ ದೊಡ್ಡ 40 ಕೋಟಿ ಜನರಿರತಕ್ಕಂಥ ದೇಶದ ಮಕ್ಕಳ ಸಂಪರ್ಕವನ್ನು ಆಕ್ಸ್‌ಫರ್ಡಿನೊಂದಿಗೆ ಜೋಡಿಸಿಕೊಳ್ಳುವುದಕ್ಕೆ ಸಾಧ್ಯವೇ ಅನ್ನುವುದನ್ನು ಯೋಚನೆ ಮಾಡಬೇಕು. ಈ ದೇಶದ ಜನರಾದ ನಮಗೆ ಎಲ್ಲ ದೇಶೀಯ ಭಾಷೆಗಳ ಸಂಪರ್ಕ ಮೊದಲು ಬೇಕು. ಮುಂಬಯಿನಲ್ಲಿರತಕ್ಕಂಥ ಕನ್ನಡಿಗರು ಮರಾಠಿ ಕಲಿಯಬೇಕು. ತಮಿಳು, ಮಲಯಾಳಿ, ಮರಾಠಿ ಮತ್ತು ತೆಲುಗು—ಈ ನಾಲ್ಕು ಭಾಷೆಗಳನ್ನೂ ನಾವು ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಅವರು ನಮ್ಮ ಅಣ್ಣ ತಮ್ಮಂದಿರು, ಅಕ್ಕ ತಂಗಿಯರು, ದಿನಬೆಳಗಾದರೆ ಅವರ ಜೊತೆಯಲ್ಲಿ ನಮ್ಮ ಒಡನಾಟವಿದೆ. ಸ್ವಲ್ಪ ಗೋದಾವರಿ ಉತ್ತರಕ್ಕೆ ಹೋದರೆ, ಕಾಜೀಪೇಟೆ ದಾಟುವ ಹೊತ್ತಿಗೆ, ವಾರ್ಧಾದಲ್ಲಿ ಇಳಿಯುವ ಹೊತ್ತಿಗೆ, ಒಡೆ ಸಾಂಬಾರ್ ಅಲ್ಲಿ ಸಿಕ್ಕಿದರೂ 'ಒಡೆ ಸಾಂಬಾರ್ ದೇವ್' ಎಂದು ಹೇಳಬೇಕು.

ಇನ್ನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮುಂದೆ ಹೋಗುತ್ತಾ ಹೋಗುತ್ತಾ ಹಿಂದಿಯನ್ನು ಅನಿವಾರ್ಯವಾಗಿ ಕಲಿಯಬೇಕಾಗಿ ಬರುತ್ತದೆ. ಆದರೆ ವಿಮಾನದಲ್ಲಿ ನೇರವಾಗಿ ಮಾಸ್ಕೊ ಅಥವಾ ವಾಷಿಂಗ್ಟನ್ ಮುಂತಾದ ಪ್ರದೇಶಗಳಿಗೆ ಹೋಗಿ ಬರುವವರಿಗೆ ಈ ವಿಷಯದ ಅರಿವು ಅಷ್ಟಾಗಿ ಆಗುವುದಿಲ್ಲ. ಈ ಸಂದರ್ಭದಲ್ಲಿ ಇದನ್ನು ಚೆನ್ನಾಗಿ ಅರ್ಥಮಾಡಿಕೊಂಡಾಗ ಮಾತ್ರ ಈ ಭಾಷೆ ಅಥವಾ ಈ ಭಾಷೆಯ ಸಮಸ್ಯೆ ಯಾವ ಒಂದು ಸಿದ್ಧಾಂತದ ಮೇಲೆ ಆಧಾರವಾಗಿ ನಿಂತಿದೆ ಎಂಬುದು ಗೊತ್ತಾಗುತ್ತದೆ. ಇಲ್ಲದೇ ಹೋದಲ್ಲಿ ಇದು ಪರಸ್ಪರ ಉದ್ರೇಕ ಮತ್ತು ವೈಮನಸ್ಯಕ್ಕೆ ಕಾರಣವಾಗುತ್ತದೆ. ಉದಾಹರಣೆಗಾಗಿ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಶ್ರೀಮಾನ್ ಡಿಮೆಲೊರ, ಫ್ರಾಂಕ್ ಅಂಥೋನಿಯವರ ಮಾತೃಭಾಷೆ ಇಂಗ್ಲೀಷ್; ಇಂಗ್ಲಿಷ್‌ನಲ್ಲಿಯೇ ಮಾತನಾಡಬೇಕು. ನಾನು ಅವರನ್ನು ಕನ್ನಡದಲ್ಲಾಗಲೀ, ಹಿಂದಿಯಲ್ಲಾಗಲೀ ಮಾತನಾಡಿ ಎಂಬುದಾಗಿ ಒತ್ತಾಯಪಡಿಸುವುದಿಲ್ಲ. ಆ ರೀತಿಯಾಗಿ ನಾನು ನಿರೀಕ್ಷೆ ಕೂಡ ಮಾಡುವುದಿಲ್ಲ. ಒಂದು ವೇಳೆ ಕನ್ನಡವನ್ನು ಕಲಿತು ಮಾತನಾಡಿದರೆ ನನಗೆ ಬೇಸರವಿಲ್ಲ. ಅವರಿಗೆ ಆ ರೀತಿ ನೆಹರೂ ಅವರು ಆಶ್ವಾಸನೆ ಕೊಡುವ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಅದೇರೀತಿಯಾಗಿ ಕರ್ನಾಟಕ ರಾಜ್ಯದ ಈ ಸದನ ಶ್ರೀ ಡಿಮೆಲೊ ಮತ್ತು ಅವರ ಸಂತಾನಕ್ಕೆ ಆಶ್ವಾಸನೆಯನ್ನು ಕೊಡಬೇಕು. ಅದನ್ನು ಸರ್ಕಾರದವರು ಮರೆಯದೆ ನಡೆಸಿಕೊಂಡು ಹೋಗಬೇಕು. ಏಕೆಂದರೆ ಅವರ ಮಾತೃಭಾಷೆ ಇಂಗ್ಲಿಷ್ ಭಾಷೆ. ಅವರು ಕೇವಲ ಅಲ್ಪಸಂಖ್ಯಾತರಿದ್ದಾರೆ. ಈವೊತ್ತು ಇಂಗ್ಲಿಷ್ ಬರುವವರು ನಮ್ಮ ದೇಶದಲ್ಲಿ ಒಂದು ಪರ್ಸೆಂಟ್ ಇದ್ದಾರೆ. ನೂರಕ್ಕೆ ಒಬ್ಬ ಇರಬಹುದು. ಭಾಷಾ ದೃಷ್ಟಿಯಿಂದ ಅವರಿಗೆ ರಕ್ಷಣೆ ಕೊಡಬೇಕು. ಅವರ ಮಕ್ಕಳುಮರಿಗಳಿಗೆ ಅವರ ಮಾತೃ ಭಾಷೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟು ರಾಜ್ಯ ಭಾಷೆಯಲ್ಲಿಯೇ ಮಾತನಾಡಿ ಎಂದು ಅವರನ್ನು ಒತ್ತಾಯಮಾಡುವುದಕ್ಕೆ ಹೋಗದಿದ್ದರೆ ಅವರ ಸಮಸ್ಯೆಗೆ ಉತ್ತರ ಸಾಕು ಮತ್ತು ಅವರು ಅದಕ್ಕಿಂತ ಹೆಚ್ಚಿಗೆ ನಿರೀಕ್ಷಣೆ ಮಾಡುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಈ ವಿಧೇಯಕವನ್ನು ರಚನೆ ಮಾಡಿರತಕ್ಕ ಬಗ್ಗೆ ನಾನು ಮಾತನಾಡಬೇಕಾಗಿದೆ.

Mr. SPEAKER.—We have already taken $3\frac{1}{2}$ hours for this Bill. Anyhow, we will now adjourn. Before we adjourn, I would like to inform Hon'ble Members that a copy of the Report that was referred to, is placed in the Library. Such of those who desire to go through it, may do so.

Regarding Question 150 relating to Sri A. J. Dodmeti and replied to by the Minister for Education, copies are cyclostyled and they may be corrected. I am saying this because it should not be said tomorrow that they have not received it. They are put in the pigeon holes.

The House will now adjourn to meet tomorrow at 1 P.M.

The House adjourned at Five Minutes past Six of the Clock to meet again at One of the Clock on Wednesday, the 4th September 1963.

WD 897—GPB—900—27-9-63